# ನಾವು ನಮ್ರವಾಗಿ ತಲೆತಗ್ಗಿಸುತ್ತೇವೆ ......

[ವಿಷಮಗೊಂಡ ಸಂಬಂಧಗಳ ಕುರಿತು
ಎಂಸಿಸಿಐ ಹಾಗೂ
ಸಿಪಿಐ (ಮಾ-ಲೆ) (ಪೀವಾ)ಗಳ ಆತ್ಮವಿಮರ್ಶೆ]

**ಕೇಂದ್ರ ಸಮಿತಿ (ಹಂಗಾಮಿ)**
**ಸಿಪಿಐ (ಮಾವೊವಾದಿ)**

# ನಾವು ನಮ್ರವಾಗಿ ತಲೆತಗ್ಗಿಸುತ್ತೇವೆ . . . . .

1980ರಿಂದಲೂ ಸಿಪಿಐ (ಮಾ-ಲೆ) (ಪೀವಾ) ಮತ್ತು ಎಂಸಿಸಿಐ ನಡುವೆ ನಿಕಟವಾದ ಸಂಬಂಧಗಳಿದ್ದವು. ಪರಸ್ಪರರ ಬಗ್ಗೆ ಗೌರವ, ಪರಸ್ಪರರ ಕ್ರಾಂತಿಕಾರಿ ಸ್ವಭಾವದ ಬಗ್ಗೆ ಎರಡೂ ಸಂಘಟನೆಗಳಿಗೆ ಆಳವಾದ ವಿಶ್ವಾಸ, ಹಾಗೂ ಒಂದೇ ಕ್ರಾಂತಿಕಾರಿ ಸಂಘಟನೆಯಾಗಿ ಐಕ್ಯಗೊಳ್ಳಬೇಕೆಂಬ ಪ್ರಬಲವಾದ ಅಪೇಕ್ಷೆ - ಇವು ಈ ದೀರ್ಘವಾದ ಮತ್ತು ಭದ್ರವಾಗಿ ಉಳಿದುಬಂದ ಸ್ನೇಹದ ಮೂಲಾಧಾರವಾಗಿದ್ದವು. ಈ ಸಂಬಂಧ ಅರಳಿ ಇವೆರಡೂ ಸಂಘಟನೆಗಳ ಐಕ್ಯತೆಯಲ್ಲಿ ಇಷ್ಟು ಕಾಲದವರೆಗೂ ತುದಿಮುಟ್ಟಲಿಲ್ಲವೆಂಬುದು ಭಾರತದ ಕ್ರಾಂತಿಯ ದುರದೃಷ್ಟಗಳಲ್ಲೊಂದು. ಇಂಥ ಐಕ್ಯತೆಯನ್ನು ಸಾಧ್ಯವಾಗಿಸುವಲ್ಲಿ ತಂತಮ್ಮ ವೈಫಲ್ಯವನ್ನು ಎರಡೂ ಪಕ್ಷಗಳು ತಂತಮ್ಮ ರಾಜಕೀಯ ಮತ್ತು ಸಂಘಟನಾತ್ಮಕ ಸಮೀಕ್ಷಾ ವರದಿಗಳಲ್ಲಿ ಸಮೀಕ್ಷೆಗೆ ಒಳಪಡಿಸಿವೆ.

1980ರಿಂದೀಚೆಗಿನ ಈ ಸುದೀರ್ಘ ಅವಧಿಯಲ್ಲಿ ಒಂದು ಸ್ವಲ್ಪ ಕಾಲ ಈ ಎರಡು ಸಂಘಟನೆಗಳ ನಡುವಿನ ಸಂಬಂಧಗಳು ಕೆಟ್ಟು ಹೋಗಿದ್ದವು. ಸಂಬಂಧಗಳು ಹದಗೆಟ್ಟ ಪರಿಣಾಮವಾಗಿ ಎರಡೂ ಸಂಘಟನೆಗಳ ನಡುವೆ ಹಿಂಸಾತ್ಮಕವಾದ ರಕ್ತಸಿಕ್ತ ಘರ್ಷಣೆಗಳು ನಡೆದವು. ಅಮೂಲ್ಯ ಜೀವಗಳು ಯಾವುದೇ ಎಗ್ಗಿಲ್ಲದೆ ನಾಶವಾದವು. ಜನಸಮೂಹ ಈ ಘರ್ಷಣೆಗಳ ಪರಿಣಾಮವನ್ನು ಅನುಭವಿಸಬೇಕಾಗಿ ಬಂತು; ಅದು ಅವರಿಗೆ ಹೇಳಲಾರದಷ್ಟು ಸಂಕಟ, ತೊಂದರೆಗಳನ್ನು ಉಂಟುಮಾಡಿತು. ಎರಡೂ ಪಕ್ಷಗಳ ನಡುವೆ ಸತತವಾಗಿ ನಡೆಯುತ್ತಿದ್ದ ಘರ್ಷಣೆಗಳಿಂದಾಗಿ ಪಕ್ಷ ಕಾರ್ಯಕರ್ತರು ಮತ್ತು ಶ್ರೇಣಿಗಳು, ದೇಶದೊಳಗಿನ ಮತ್ತು ಹೊರಗಿನ ಇನ್ನಿತರ ಕ್ರಾಂತಿಕಾರಿ ಪಕ್ಷಗಳು, ಹಾಗೂ ಭಾರತದ ಕ್ರಾಂತಿಯ ಲಕ್ಷೋಪಲಕ್ಷ ಸಹಾನುಭೂತಿಪರರು ಮತ್ತು ಹಿತೈಷಿಗಳು ಸಂಕಟಕ್ಕೀಡಾಗಿದ್ದರು. ಈ ಭ್ರಾತೃಹತ್ಯಾಕಾರಿ ಸಂಘರ್ಷವು ನಮ್ಮೆರಡೂ ಪಕ್ಷಗಳ ಗೌರವಾರ್ಹವಾದ ಮತ್ತು ಧೀರೋದಾತ್ತವಾದ ಚರಿತ್ರೆಯ ಪಾಲಿಗೊಂದು ಅತ್ಯಂತ ಕೆಟ್ಟ ಕಳಂಕವಾಗಿದೆ.

ಎರಡೂ ಪಕ್ಷಗಳ ಉನ್ನತ ನಾಯಕತ್ವಗಳು ಈ ಅತ್ಯಂತ ಅವಮಾನಕರವಾದ ಮತ್ತು ದುಬಾರಿಯಾದ ಪ್ರಮಾದವನ್ನು ಅರ್ಥ ಮಾಡಿಕೊಂಡು 2003ರ ಫೆಬ್ರವರಿಯಿಂದ ಆಳವಾದ ಆತ್ಮವಿಮರ್ಶೆ ಮತ್ತು ತಿದ್ದುಪಡಿಯ ಪ್ರಕ್ರಿಯೆ ಆರಂಭಿಸಿದವು. ಎರಡೂ ಪಕ್ಷಗಳ ನಡುವಿನ ಮಾತುಕತೆಗಳು ನಮ್ಮ ತಪ್ಪುಗಳ ಅಗಾಧತೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಇಬ್ಬರಿಗೂ ಸಹಾಯಕವಾದವು. ಆತ್ಮವಿಮರ್ಶೆ ಮತ್ತು ತಿದ್ದುಪಡಿಯ ಪ್ರಕ್ರಿಯೆಯು ನಮ್ಮೆರಡೂ ಪಕ್ಷಗಳ ರಾಜಕೀಯ ಮತ್ತು ಸಂಘಟನಾತ್ಮಕ ಐಕ್ಯತೆಯ ಪ್ರಕ್ರಿಯೆಗೊಂದು ಹೆಚ್ಚು ದೃಢವಾದ ತಳಹದಿಯನ್ನು ಹಾಕಿಕೊಟ್ಟಿತು. ಘರ್ಷಣೆಗಳ ಈ ಕಾಲಾವಧಿಯಲ್ಲಿನ ಎರಡೂ ಪಕ್ಷಗಳ ಆಚರಣೆಗಳಿಗೆ ಕಾರಣವಾದ ಸೈದ್ಧಾಂತಿಕ ಮತ್ತು ರಾಜಕೀಯ ಮೂಲಕಾರಣಗಳನ್ನು ಗುರುತಿಸಲಾಯಿತು. ಮನೋನಿಷ್ಠವಾದ, ಸಂಕುಚಿತವಾದ ಮತ್ತು ಪೆಟಿಬೂರ್ಶ್ವಾ ಅಹಂಭಾವಗಳು ಇಂಥದೊಂದು ತಪ್ಪುಹಾದಿಗೆ ಈ ಪಕ್ಷಗಳನ್ನು ದೂಡುವಲ್ಲಿ ನಿರ್ಣಾಯಕವಾದಂತಹ ಅಂಶಗಳಾಗಿವೆ. ಸಿಪಿಐ (ಮಾ-ಲೆ) (ಪೀವಾ) ಮತ್ತು ಎಂಸಿಸಿಐ ಪಕ್ಷಗಳು ಎರಡೂ ಪಕ್ಷಗಳ ವಿಲೀನಕ್ಕೆ ಪೂರ್ವಭಾವಿಯಾಗಿ ಮಾಡಿಕೊಂಡಿರುವ ಆತ್ಮವಿಮರ್ಶೆಯನ್ನು ಸಿಪಿಐ (ಮಾವೊವಾದಿ) ಪಕ್ಷವು ಭಾರತದ ಕಾರ್ಮಿಕ ವರ್ಗ, ಕ್ರಾಂತಿಕಾರಿ ಜನಸಮೂಹ, ದೇಶದ ಒಳಗಿನ ಮತ್ತು ಹೊರಗಿನ ವಿವಿಧ ಕ್ರಾಂತಿಕಾರಿ ಪಕ್ಷಗಳು ಹಾಗೂ ಭಾರತದ ಕ್ರಾಂತಿಯ ಸಹಾನುಭೂತಿಪರರು ಮತ್ತು ಹಿತೈಷಿಗಳು - ಇವರೆಲ್ಲರ ಮುಂದಿಡುತ್ತಿದೆ. ಸಿಪಿಐ (ಮಾವೊವಾದಿ) ಪಕ್ಷವು ವಿನಮ್ರವಾಗಿ ತಲೆತಗ್ಗಿಸುತ್ತಿದೆ ಹಾಗೂ ತನ್ನ ತಪ್ಪುಗಳನ್ನು ಈ ಸಂಘರ್ಷದಿಂದ ತೊಂದರೆಗೀಡಾದ ಅಸಂಖ್ಯಾತ ಜನತೆ, ಪ್ರಾಣ ಕಳೆದುಕೊಂಡವರ ಕುಟುಂಬಗಳು, ದೈಹಿಕ ಹಾನಿಗೆ ಈಡಾದವರು ಹಾಗೂ ಎಲ್ಲಾ ಕ್ರಾಂತಿಕಾರಿಗಳು ಮತ್ತು ಹಿತೈಷಿಗಳು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತದೆ. ಇಂಥ ಆಚರಣೆಗೆ ಕಾರಣವಾದಂತಹ ನಮ್ಮಲ್ಲಿನ ಎಲ್ಲಾ ಕಾರ್ಮಿಕ ವರ್ಗೇತರ ಗುಣ-ಸ್ವಭಾವಗಳನ್ನೂ ತೊಡೆದುಹಾಕುತ್ತೇವೆ ಎಂದು ನಾವು ಪ್ರತಿಜ್ಞೆ ಮಾಡುತ್ತೇವೆ.

ಈ ಹಿಂದಿನ ಸಿಪಿಐ (ಎಂಎಲ್) (ಪೀವಾ) ಮತ್ತು ಎಂಸಿಸಿಐಗಳ ಆತ್ಮವಿಮರ್ಶೆಗಳ ಪೂರ್ಣಪಾಠವು ಈ ಪ್ರಕಟಣೆಯಲ್ಲಿದೆ. ನಮ್ಮ ಆತ್ಮವಿಮರ್ಶೆಯನ್ನು ಇನ್ನೂ ಆಳಗೊಳಿಸಿ ಅಭಿವೃದ್ಧಿಪಡಿಸುವುದಕ್ಕಾಗಿ ಜನಸಮೂಹದಿಂದ ಹಾಗೂ ಕ್ರಾಂತಿಕಾರಿ ಜನವಿಭಾಗಗಳಿಂದ ವಿಮರ್ಶೆಗಳನ್ನು ಸ್ವಾಗತಿಸುತ್ತೇವೆ.

**ಕೇಂದ್ರ ಸಮಿತಿ (ಹಂಗಾಮಿ)**

**21.9.2004** **ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೊವಾದಿ)**

# ಎಂಸಿಸಿಐ ಮತ್ತು ಸಿಪಿಐ (ಎಂಎಲ್) (ಪೀವಾ) ನಡುವಿನ ಘರ್ಷಣೆಗಳ ಬಗ್ಗೆ ಎಂಸಿಸಿಐ ಕೇಂದ್ರ ಸಮಿತಿ ಮಂಡಿಸಿದ ಆತ್ಮವಿಮರ್ಶೆ

ಎಲ್ಲರಿಗೂ ಗೊತ್ತಿರುವಂತೆ, ಸಂಬಂಧಗಳು ಉದ್ವಿಗ್ನಗೊಂಡ ಕಾಲಾವಧಿಯೊಂದು 1990ರ ದಶಕದ ಆರಂಭದಲ್ಲಿ ಮೊದಲಿಗೆ ಸಿಪಿಐ (ಎಂಎಲ್) (ಪಿಯೂ) ಮತ್ತು ಎಂಸಿಸಿಐ ನಡುವೆ ಆರಂಭವಾಯಿತು. ಎರಡೂ ಸಂಘಟನೆಗಳ ನಡುವಿನ ಈ ಉದ್ವಿಗ್ನ ಸಂಬಂಧಗಳು ಸಿಪಿಐ (ಎಂಎಲ್) (ಪೀವಾ) ಮತ್ತು ಸಿಪಿಐ (ಎಂಎಲ್) (ಪಿಯೂ) 1998ರಲ್ಲಿ ವಿಲೀನಗೊಂಡ ನಂತರವೂ ಮುಂದುವರಿದವು. ಅದಕ್ಕೆ ಮೊದಲು ಸುದೀರ್ಘ ಕಾಲ ಎಂಸಿಸಿಗೂ ಪಿಯೂ ಮತ್ತು ಪೀವಾ ಪಕ್ಷಗಳಿಗೂ ನಡುವಿನ ಸೋದರ ಸಂಬಂಧಗಳು ಬಹಳ ಚೆನ್ನಾಗಿದ್ದವು ಎಂಬುದೂ ಅಷ್ಟೇ ನಿಜ. ಆ ನಂತರದಲ್ಲಿ ಪರಸ್ಪರರ ಸಂಬಂಧದಲ್ಲಿ ಒಂದು ಅನಪೇಕ್ಷಣೀಯವಾದ ಬಿರುಕು ಉಂಟಾಯಿತು. ಎಂಸಿಸಿ ಮತ್ತು ಪಿಯೂ ನಡುವಿನ ಈ ಉದ್ವಿಗ್ನ ಸಂಬಂಧಗಳು 1990ರ ದಶಕದ ಉತ್ತರಾರ್ಧದ ಕಾಲಾವಧಿಯಲ್ಲಿ ಪೀವಾ ಜೊತೆಗೂ ಮುಂದುವರಿದವು. ಈ ಘರ್ಷಣೆಯು ಪರಸ್ಪರರನ್ನು ಥಳಿಸುವಿಕೆ, ಕೊಲ್ಲುವಿಕೆ, ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳುವಿಕೆ ಮುಂತಾದ ರೂಪಗಳನ್ನು ಸಹ ವಿಸ್ತೃತವಾಗಿ ತೆಗೆದುಕೊಂಡವು.

ಭಾರತದ ಎರಡು ಅಪ್ರತಿಮ ಕ್ರಾಂತಿಕಾರಿ ಸಂಘಟನೆಗಳ ನಡುವಿನ ಪರಸ್ಪರ ಘರ್ಷಣೆಗಳ ಈ ಉದ್ವಿಗ್ನ ಪರಿಸ್ಥಿತಿಯು ದೇಶದೊಳಗಿನ ಹಾಗೂ ಜಗತ್ತಿನಾದ್ಯಂತದ ಎಲ್ಲಾ ಪ್ರಾಮಾಣಿಕ ಕ್ರಾಂತಿಕಾರಿ ಶಕ್ತಿಗಳ ಪಾಲಿಗೆ ಅತ್ಯಂತ ಆಳವಾದ ಆತಂಕ ಮತ್ತು ಕಳವಳಕ್ಕೆ ಕಾರಣವಾಗಿ ಪರಿಣಮಿಸಿತು. 'ಕ್ರಾಂತಿಕಾರಿ ಅಂತರರಾಷ್ಟ್ರೀಯವಾದಿ ಚಳುವಳಿ'(ರಿಮ್) ಇದರ ದಕ್ಷಿಣ ಏಷ್ಯಾ ಪ್ರಾದೇಶಿಕ ಸಮಿತಿ ಮತ್ತು ಇತರ ಕೆಲ ಕ್ರಾಂತಿಕಾರಿ ಸಂಘಟನೆಗಳು ಹಾಗೂ ವ್ಯಕ್ತಿಗಳು ಎರಡೂ ಪಕ್ಷಗಳ ಕೇಂದ್ರ ಸಮಿತಿಗಳಿಗೆ ಪತ್ರಗಳನ್ನು ಕಳಿಸಿ, ತಮ್ಮ ತಮ್ಮೊಳಗಿನ ಈ ಘರ್ಷಣೆಗಳನ್ನು ನಿಲ್ಲಿಸುವಂತೆ ಮನವಿ ಮಾಡಿದರು. ಈ ಆಂತರಿಕ ಘರ್ಷಣೆಗಳನ್ನು ನಿಲ್ಲಿಸಬೇಕೆಂಬ ಒತ್ತಾಯ ನಮ್ಮ ಪಕ್ಷದೊಳಗೆ ಸಹ ಎಲ್ಲಾ ಹಂತದ ಸದಸ್ಯ ಶ್ರೇಣಿಗಳಲ್ಲಿ ಬೆಳೆಯತೊಡಗಿ ಪ್ರಬಲವಾಯಿತು. ಈ ಘರ್ಷಣೆಗಳ ಬಗ್ಗೆ ನಮ್ಮ ಕೇಂದ್ರ ಸಮಿತಿಯೊಳಗೆ ಕೂಡ ಚರ್ಚೆ ತೀವ್ರವಾಗಿ ಬೆಳೆದು ನಿರ್ಣಾಯಕ ಹಂತಕ್ಕೆ ಮುಟ್ಟಿತು.

ಜನವರಿ 2000ದಲ್ಲಿ ನಮ್ಮ ಕೇಂದ್ರ ಸಮಿತಿಯ ಒಂದು ಬಹುಮುಖ್ಯ ಸಭೆ ನಡೆಯಿತು. ಈ ಸಭೆಯ ಚರ್ಚೆ ಎರಡು ಮೂಲಭೂತ ಪ್ರಶ್ನೆಗಳ ಮೇಲೆ ಕೇಂದ್ರೀಕರಿಸಿತು. ಮೊದಲನೆಯದು ಈ ಘರ್ಷಣೆಗಳನ್ನು ನಿಲ್ಲಿಸುವುದು, ಎರಡನೆಯದು "ಮಾವೊ ತ್ಸೆ-ತುಂಗ್ ವಿಚಾರಧಾರೆ" ಎಂಬ ಪದದ ಬದಲು "ಮಾವೊವಾದ"ದ ಎಂಬ ಪದವನ್ನು ಅಳವಡಿಸಿಕೊಳ್ಳುವ ಹಾಗೂ ಅದನ್ನು ಗ್ರಹಿಸುವ ವಿಚಾರ. ಕೇಂದ್ರ ಸಮಿತಿಯೊಳಗೆ ಈ ಎರಡೂ ಪ್ರಶ್ನೆಗಳ ಮೇಲೆ ಬಿರುಸಿನ ಚರ್ಚೆ ನಡೆದು ಅಂತಿಮವಾಗಿ ಈ ಕೆಳಕಂಡ ತೀರ್ಮಾನಗಳಿಗೆ ತಲುಪಿತು: (1) ಪೀವಾ ಜೊತೆಗಿನ ಘರ್ಷಣೆಗಳನ್ನು ನಿಲ್ಲಿಸುವ ಏಕಪಕ್ಷೀಯ ಮತ್ತು ಬಹಿರಂಗ ಘೋಷಣೆ ಮಾಡಬೇಕು, ಹಾಗೂ (2) "ಮಾವೊ ತ್ಸೆ-ತುಂಗ್ ವಿಚಾರಧಾರೆ" ಶಬ್ದದ ಬದಲಿಗೆ "ಮಾವೊವಾದ" ಎಂಬುದನ್ನು ಅಳವಡಿಸಿಕೊಳ್ಳಬೇಕು. ಅದರಂತೆ, 2000ದ ಜನವರಿ 7ರಂದು ನಮ್ಮ ಕೇಂದ್ರ ಸಮಿತಿಯು ಈ ಘರ್ಷಣೆಗಳನ್ನು ಏಕಪಕ್ಷೀಯವಾಗಿ ನಿಲ್ಲಿಸುವ ಬಹಿರಂಗ ಘೋಷಣೆಯನ್ನು ಹೊರಡಿಸಿತು. ಇದಕ್ಕೆ ಸ್ಪಂದಿಸಿದ ಸಿಪಿಐ (ಮಾಲೆ) (ಪೀವಾ) ಕೂಡ ಘರ್ಷಣೆಗಳನ್ನು ನಿಲ್ಲಿಸುವ ಘೋಷಣೆಯನ್ನು ಮಾರ್ಚ್‌ನಲ್ಲಿ ಮಾಡಿತು.

ಹೀಗೆ, ಹದಗೆಟ್ಟಿದ್ದ ಸಂಬಂಧಗಳು ಎರಡೂ ಸಂಘಟನೆಗಳು ಕೈಗೊಂಡ ಈ ಕ್ರಮಗಳಿಂದಾಗಿ ಉತ್ತಮವಾಗತೊಡಗಿದವು. ಈ ಪ್ರಕ್ರಿಯೆ ಮತ್ತೂ ಮುಂದುವರಿದು, ಎರಡೂ ಪಕ್ಷಗಳ ಕೇಂದ್ರಮಟ್ಟದ ಸಭೆಯೊಂದು 2001ರ ಆಗಸ್ಟ್‌ನಲ್ಲಿ ನಡೆಯಿತು ಹಾಗೂ ಆಂತರಿಕ ಘರ್ಷಣೆಗಳನ್ನು ನಿಲ್ಲಿಸುವಂತೆ ಜಂಟಿ ಮನವಿಯೊಂದನ್ನು ಬಿಡುಗಡೆ ಮಾಡಲಾಯಿತು.

ಪರಿಣಾಮವಾಗಿ, ಎರಡೂ ಸಂಘಟನೆಗಳ ನಡುವಿನ ಹದಗೆಟ್ಟ ಸಂಬಂಧಗಳ ಅಧ್ಯಾಯ ಮುಗಿದು, ಆತ್ಮೀಯ ಸಂಬಂಧಗಳ ಹೊಸ ಅಧ್ಯಾಯವೊಂದು ಬೆಳೆಯಲಾರಂಭಿಸಿತು. ಈ ಪರಿಸ್ಥಿತಿಯ ನಡುವೆ ನಮ್ಮ ಕೇಂದ್ರ ಸಮಿತಿಯು ಎರಡೂ ಸಂಘಟನೆಗಳ ನಡುವೆ 1995ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿಬಂದಿದ್ದಂತಹ ರಾಜಕೀಯ ಅಂಶಗಳ ಮೇಲೆ ದ್ವಿಪಕ್ಷೀಯ ಚರ್ಚೆಯ ಪ್ರಕ್ರಿಯೆಯನ್ನು ಪುನರಾರಂಭಿಸುವ ನಿರ್ಧಾರ ಕೈಗೊಂಡಿತು. ಅದೇ ವೇಳೆ ನಮ್ಮ ಕೇಂದ್ರ ಸಮಿತಿಯು ನಮ್ಮೆರಡೂ ಸಂಘಟನೆಗಳ ನಡುವಿನ ಹದಗೆಟ್ಟಿದ್ದ ಸಂಬಂಧಗಳಿಗೆ ಸಂಬಂಧಪಟ್ಟಂತೆ ಹಾಗೂ ಅವುಗಳಿಗೆ ಎಂಸಿಸಿ ಎಷ್ಟುಮಟ್ಟಿಗೆ ಜವಾಬ್ದಾರಿಯಾಗಿತ್ತೋ ಅದಕ್ಕೆ ಅನ್ವಯಿಸುವಂತೆ ತನ್ನ ಕಡೆಯಿಂದ ಸ್ಪಷ್ಟ ಹಾಗೂ ತೆರೆದ ಮನಸ್ಸಿನ ಕಾನ್‌ಕ್ರೀಟ್ ಆದ ಆತ್ಮವಿಮರ್ಶೆ ಮಂಡಿಸಲು ತೀರ್ಮಾನಿಸಿತು.

2002ರ ನವೆಂಬರ್‌ನಲ್ಲಿ ನಡೆದ ನಮ್ಮ ಸಿಸಿ ಸಭೆಯು ಈ ಮೇಲಿನ ನಿರ್ಣಯದ ಮುಂದುವರಿಕೆಯಾಗಿ, ನಮ್ಮ ಪರಸ್ಪರ ಸಂಬಂಧಗಳ ಇಡೀ ಕಾಲಾವಧಿಯಲ್ಲಿ ಉಂಟಾದ ಏರಿಕೆ ಮತ್ತು ಇಳಿಕೆಗಳನ್ನು ಕುರಿತು ಒಂದು ಒಟ್ಟಾರೆ ಮೌಲ್ಯಾಂದಾಜು ನಡೆಸಿತು. ಪಿಯೂ ಮತ್ತು ಪೀವಾಗಳು ವಿಲೀನಗೊಳ್ಳುವ ಮುಂಚೆ 1978ರಿಂದ ಪಿಯು ಜೊತೆಗೆ ಹಾಗೂ 1981ರಿಂದ ಪೀವಾ ಜೊತೆಗೆ ನಮ್ಮ ಪಕ್ಷ ಹೊಂದಿದ್ದ ಬಹಳ ಹಿತಕರವಾದ ಸೌಹಾರ್ದ ಸಂಬಂಧಗಳನ್ನು ನಾವು ಮೌಲ್ಯಾಂದಾಜು ಮಾಡಿದೆವು. ಪೀವಾ ಮತ್ತು ಪಿಯು ವಿಲೀನವಾದ ನಂತರ ಸಂಬಂಧ ಹಳಸಿಕೊಂಡಿದ್ದನ್ನೂ 2002ರ ನಂತರದ ಹಾರ್ದಿಕ ಸಂಬಂಧಗಳ ಕಾಲಾವಧಿಯನ್ನೂ ಸಿಸಿ ಮೌಲ್ಯಾಂದಾಜು ಮಾಡಿತು. ಈ ಮೌಲ್ಯಾಂದಾಜನ್ನು ಆಧರಿಸಿ ಈ ಕೆಳಕಂಡ ನಿರ್ಣಯಗಳಿಗೆ ಬರಲಾಯಿತು:

i) ನಮ್ಮ ನಡುವಿನ ಸಂಬಂಧಗಳ ಸುದೀರ್ಘವಾದ ಇಡೀ ಕಾಲಾವಧಿಯಲ್ಲಿ ಹಾರ್ದಿಕ ಸಂಬಂಧಗಳ ಆಸ್ಪೆಕ್ಟೇ ಪ್ರಧಾನವಾದುದಾಗಿದ್ದು, ಕೆಟ್ಟ ಅಥವಾ ವಿಷಮ ಸಂಬಂಧದ ಆಸ್ಪೆಕ್ಟ್ ಸೆಕೆಂಡರಿಯಾಗಿದೆ.

ii) ಪರಸ್ಪರ ಸಂಬಂಧಗಳ ಇಡೀ ಅವಧಿಯಲ್ಲಿ ವಿಷಮ ಸಂಬಂಧಗಳ ಕಾಲಾವಧಿಯನ್ನು ಒಂದು ಕರಾಳ ಅಧ್ಯಾಯವೆಂದು ಗುರುತಿಸಲಾಯಿತು.

iii) ಈ ವಿಷಮ ಸಂಬಂಧಗಳಿಗೆ ಅಥವಾ ಕರಾಳ ಅಧ್ಯಾಯಕ್ಕೆ ಸಂಬಂಧಪಟ್ಟಂತೆ ಎಂಸಿಸಿ ತಾನು ಅದಕ್ಕೆ ಎಷ್ಟು ಮಟ್ಟಿಗೆ ಜವಾಬ್ದಾರವಾಗಿದೆಯೋ ಅದಕ್ಕೆ ಅನ್ವಯವಾಗುವಂತೆ ತನ್ನ ಕಾನ್‌ಕ್ರೀಟ್ ಆದ, ಸ್ಪಷ್ಟವಾದ ಮತ್ತು ಬಹಿರಂಗ ಆತ್ಮವಿಮರ್ಶೆಯನ್ನು ಸರಿಯಾಗಿ ಮುಂದಿಡಬೇಕು.

iv) ಈ ಆತ್ಮವಿಮರ್ಶೆಯ ಪ್ರಕ್ರಿಯೆಯಲ್ಲಿ ನಾವು "ಪೀವಾ ಹೀಗೆ ಹೀಗೆ ಮಾಡಿದ್ದರಿಂದ ನಾವು ಪ್ರತೀಕಾರ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು" ಎಂಬಂಥ ನೆಪಗಳನ್ನು ಹುಡುಕಬಾರದು.

v) ಈ ಘರ್ಷಣೆಗಳ ವೇಳೆ ಎರಡೂ ಕಡೆ ತಮ್ಮ ಪ್ರಾಣ ಮತ್ತು ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿರುವ ಎಲ್ಲರಿಗೂ ಸಂಬಂಧಪಟ್ಟಂತೆ, ಈ ಘರ್ಷಣೆಗಳಲ್ಲಿನ ನಮ್ಮ ಪಾಲಿನ ಜವಾಬ್ದಾರಿಯನ್ನು ನಾವು ಯಾವುದೇ ಹಿಂಜರಿಕೆಯಿಲ್ಲದೆ ಸ್ಪಷ್ಟವಾಗಿ ಹೊತ್ತುಕೊಳ್ಳಬೇಕು.

vi) ಈ ಪ್ರಕ್ರಿಯೆಯ ಜೊತೆಜೊತೆಗೇ ನಾವು ನಮ್ಮೆರಡೂ ಸಂಘಟನೆಗಳ ನಡುವೆ ಅಸ್ತಿತ್ವದಲ್ಲಿರುವ ರಾಜಕೀಯ ಭಿನ್ನಾಭಿಪ್ರಾಯಗಳ ಎಲ್ಲಾ ಅಂಶಗಳ ಬಗೆಗೂ ತೆರೆದ ಮನಸ್ಸಿನಿಂದ ಹಾಗೂ ರಚನಾತ್ಮಕ ದೃಷ್ಟಿಕೋನದೊಂದಿಗೆ ಪರಸ್ಪರ ಚರ್ಚೆಯ ಪ್ರಕ್ರಿಯೆಯನ್ನು ಮುಂದುವರಿಸಬೇಕು. ರಚನಾತ್ಮಕ ದೃಷ್ಟಿಕೋನ ಹೊಂದಿರುವುದೆಂದರೆ ಭಿನ್ನಾಭಿಪ್ರಾಯಗಳನ್ನು ಮಾಲೆಮಾವಾದದ ಆಧಾರದಲ್ಲಿ ಪರಿಹರಿಸಿಕೊಳ್ಳುವುದು ಹಾಗೂ ಆ ಮೂಲಕ ರಾಜಕೀಯ ಐಕ್ಯತೆ ಸಾಧಿಸುವುದು; ಹಾಗೂ ನಮ್ಮೆರಡೂ ಸಂಘಟನೆಗಳ ನಡುವೆ ಸಂಪೂರ್ಣವಾದ ರಾಜಕೀಯ ಮತ್ತು ಸಂಘಟನಾತ್ಮಕ ಐಕ್ಯತೆ ಸಾಧಿಸಲು ನಾವು ಶಕ್ತಿಮೀರಿ ಶ್ರಮಿಸಬೇಕು.

ಇದೇ ಸಭೆಯಲ್ಲಿ ನಾವು ನಮ್ಮ ಈ ಮುಂಚಿನ ಕೆಲವು ರಾಜಕೀಯ ನಿಲುವುಗಳನ್ನು ಗಂಭೀರವಾಗಿ ಪರಾಮರ್ಶಿಸಿದೆವು ಹಾಗೂ ತಪ್ಪಾಗಿದ್ದು;ದನ್ನು ತಿರಸ್ಕರಿಸಿ, ಕೆಲವು ಅಂಶಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಿದೆವು. [ಆ ನಿಲುವುಗಳು ಯಾವುವು ಎಂಬುದರ ವಿವರ ಇಲ್ಲಿ ಅಗತ್ಯವಿಲ್ಲ. ಅವುಗಳನ್ನು ಎಂಸಿಸಿಐ ಮತ್ತು ಸಿಪಿಐ (ಮಾಲೆ) (ಪೀವಾ) ಪಕ್ಷಗಳ ಉನ್ನತ ಮಟ್ಟದ ನಿಯೋಗಗಳ ನಡುವೆ 2003ರ ಫೆಬ್ರವರಿಯಲ್ಲಿ ನಡೆದ ಮೊದಲ ದ್ವಿಪಕ್ಷೀಯ ಸಭೆಯಲ್ಲಿ ಸಾಧಿಸಲಾದ ಏಕರೂಪ ಗ್ರಹಿಕೆಗಳನ್ನು ವಿವರಿಸಿರುವ ಪುಸ್ತಿಕೆಯಲ್ಲಿ ಉಲ್ಲೇಖಿಸಲಾಗಿದೆ.]

ಈ ಪ್ರಸ್ತುತ ಬರೆಹದ ಮೂಲಭೂತ ಉದ್ದೇಶ ಮೇಲ್ಕಂಡ ಕರಾಳ ಅಧ್ಯಾಯಕ್ಕೆ ಸಂಬಂಧಿಸಿ ನಮ್ಮ ಆತ್ಮವಿಮರ್ಶೆಯನ್ನು ಮುಂದಿಡುವುದಾಗಿದೆ. ನಮ್ಮ ಆತ್ಮವಿಮರ್ಶೆ ನಿರ್ದಿಷ್ಟವಾಗಿ ಈ ಕೆಳಕಂಡಂತಿದೆ:

1) ಘರ್ಷಣೆಗಳ ಕಾಲಾವಧಿಯಲ್ಲಿ ನಾವು ಪಿಯೂವನ್ನು ಮತ್ತು ನಂತರ ಪೀವಾ ಪಕ್ಷವನ್ನು ಕ್ರಾಂತಿಕಾರಿಯೆಂದು ಮಾತಿನಲ್ಲಿ ಹೇಳುತ್ತಲೇ ಇದ್ದೆವಾದರೂ ಆಚರಣೆಯಲ್ಲಿ ಅವುಗಳನ್ನು ಪರಿಷ್ಕರಣವಾದಿಗಳಂತೆ, ಪ್ರತಿಗಾಮಿಗಳಂತೆ ಅಥವಾ ಪ್ರತಿಕ್ರಾಂತಿಕಾರಿಗಳಂತೆ ಪರಿಗಣಿಸುತ್ತಲೇ ಬಂದೆವು ಹಾಗೂ ಅದಕ್ಕೆ ಅನುಗುಣವಾದ ಕಾರ್ಯತಂತ್ರಗಳನ್ನು ಅಳವಡಿಸಿದೆವು. ಘರ್ಷಣೆಗಳನ್ನು ಕಡಿಮೆ ಮಾಡುವಂತೆ ನಾವು ಆಗಿಂದಾಗೊ ಜಂಟಿ ಮನವಿಗಳನ್ನು ಹೊರಡಿಸುವುದು, ಜಂಟಿ ನಿರ್ಧಾರಗಳನ್ನು ಕೈಗೊಳ್ಳುವುದನನು ಮಾಡಿದ್ದರೂ ಸಹ ನಮ್ಮ ಧೋರಣೆ ಹಾಗೇ ಮುಂದುವರಿಯಿತು.

2) ಕ್ರಾಂತಿಕಾರಿ ಹೋರಾಟವನ್ನು ಹೊಸಕಿ ಹಾಕುವುದಕ್ಕಾಗಿ ನಮ್ಮ ನಿಜವಾದ ಶತ್ರು "ಸುತ್ತುವರಿಕೆ ಮತ್ತು ದಮನಿಸುವ" ತನ್ನ ದುಷ್ಟ ಕಾರ್ಯಾಚರಣೆಯನ್ನು ಮುಂದುವರಿಸುತ್ತಿದ್ದರೆ ಅದನ್ನೆದುರಿಸುವತ್ತ ನಮ್ಮ ಪೂರ್ಣ ಗಮನವನ್ನು ಕೇಂದ್ರೀಕರಿಸುವ ಬದಲು ನಾವು ಪಿಯೂವನ್ನು, ನಂತರ ಪೀವಾ ಪಕ್ಷವನ್ನು ನಮ್ಮ ವಿರೋಧಿಗಳೆಂದು ಪರಿಗಣಿಸಿ ಅವರನ್ನೆದುರಿಸುವ ಕಡೆ ನಮ್ಮ ಗಮನ ಕೇಂದ್ರೀಕರಿಸಿದೆವು.

3) ಎಂಸಿಸಿ ಮತ್ತು ಪೀವಾಗಳೆರಡೂ ಕ್ರಾಂತಿಕಾರಿ ಸಂಘಟನೆಗಳೇ ಆಗಿದ್ದಾಗ್ಯೂ ಸಹ, ವಿಷಮಗೊಂಡಿದ್ದ ಸಂಬಂಧಗಳನ್ನು ಸರಿಪಡಿಸುವುದಕ್ಕಾಗಿ ನಾವು ದ್ವಿಪಕ್ಷೀಯ ಮಾತುಕತೆ ನಡೆಸುವ ವಿಧಾನವನ್ನಾಗಲಿ ವಿಮರ್ಶೆ-ಆತ್ಮವಿಮರ್ಶೆ ವಿಧಾನವನ್ನಾಗಲಿ ಅಳವಡಿಸಿಕೊಳ್ಳಲಿಲ್ಲ. ಬದಲಿಗೆ, ನಮ್ಮ ವಿರೋಧಿ ಅಪ್ರಾಮಾಣಿಕನೆಂದು ಸಾಬೀತು ಮಾಡಲು ನಾವು ಮಾರ್ಕ್ಸ್‌ವಾದಿಯೇತರವಾದ ಪೆಟಿಬೂರ್ಶ್ವಾ ಕುತಂತ್ರಗಳನ್ನು ಅನುಸರಿಸಿದೆವು. ಎದುರಾಳಿಯನ್ನು ಚೆಸ್‌ನಂತಹ ನಡೆಗಳ ಮೂಲಕ ಸೋಲಿಸುವುದಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದೆವು. ಸಮಂಜಸವೆಂಬಂತೆ ಕಾಣುವ ವಾದಗಳ ಮೂಲಕ ನಾವು ಎದುರಾಳಿಗಳನ್ನು ಕೊನೆಯಿಲ್ಲದ ಚರ್ಚೆಯ ಬಲೆಯಲ್ಲಿ ಸಿಕ್ಕಿ ಹಾಕಿಸಲು ಪ್ರಯತ್ನಿಸಿದೆವು.

4) ಎದುರಾಳಿಗಳ ಕ್ರಾಂತಿಕಾರಿ ವರ್ಚಸ್ಸ(ಇಮೇಜ)ನ್ನೂ ಗೌರವವನ್ನೂ ಹಾಳುಗೆಡವುವ ಉದ್ದೇಶದಿಂದ ಅಖಿಲ ಭಾರತ ಮಟ್ಟದಲ್ಲಿ ಅವರನ್ನು ಬಯಲುಗೊಳಿಸುವಂತಹ ಗುರಿಯುಳ್ಳ ಅನೇಕ ಕ್ರಮಗಳನ್ನು ನಾವು ತೆಗೆದುಕೊಂಡೆವು ಅಥವಾ ತೆಗೆದುಕೊಳ್ಳಲು ಯತ್ನಿಸಿದೆವು.

5) ನಮ್ಮ ತಪ್ಪುಗಳು ಗೊತ್ತಿದ್ದಾಗ್ಯೂ ಸಹ ಅವನ್ನು ಬೋಲ್ಶೆವಿಕ್ ಸ್ಫೂರ್ತಿಯೊಂದಿಗೆ ಒಪ್ಪಿಕೊಳ್ಳಲು ಹಿಂಜರಿದೆವು, ಅದರಿಂದ ನಾವು ಕೀಳೆನ್ನಿಸುತ್ತೇವೆಂದು ಭಾವಿಸಿದೆವು.

ಈ ಆತ್ಮವಿಮರ್ಶೆಯ ಸಾರಾಂಶವೆಂದರೆ, ಒಂದು ಕ್ರಾಂತಿಕಾರಿ ಸಂಘಟನೆಯನ್ನು ನಮ್ಮ ವಾಸ್ತವಿಕ ಆಚರಣೆಯಲ್ಲಿ ಪರಿಷ್ಕರಣವಾದಿ ಹಾಗೂ ಪ್ರತಿಕ್ರಾಂತಿಕಾರಿಯಂತೆ ನಡೆಸಿಕೊಳ್ಳುವುದು ಹಾಗೂ ಶತ್ರುಭಾವದ್ದಲ್ಲದ (non-antagonistic) ವೈರುಧ್ಯವೊಂದನ್ನು ಶತ್ರುಭಾವದ್ದಾಗಿ ನೋಡುವುದು, ಈ ಗ್ರಹಿಕೆಯ ಆಧಾರದಲ್ಲಿ ಅದಕ್ಕೆ ಅನುಗುಣವಾದ ತಪ್ಪು ಕಾರ್ಯತಂತ್ರಗಳನ್ನೇ ನಮ್ಮ ಎಲ್ಲಾ ವ್ಯವಹಾರಗಳಲ್ಲೂ ಅಳವಡಿಸಿಕೊಳ್ಳುವುದು. ಇದು ಎಂಸಿಸಿಯ ಅತಿದೊಡ್ಡ ತಪ್ಪಾಗಿತ್ತು.

ಆದರೆ, ಈ ಪ್ರವೃತ್ತಿ ಬೆಳೆದುದಕ್ಕೆ ಕಾರಣಗಳೇನು ಹಾಗೂ ಅವುಗಳ ವರ್ಗಮೂಲವೇನು ಎಂಬುದೇ ಇಲ್ಲಿ ಪ್ರಶ್ನೆ. ನಾವು ಎರಡು ಮೂಲಭೂತ ಕಾರಣಗಳನ್ನು ವಿಶ್ಲೇಷಿಸಿದ್ದೇವೆ:

i) ನಮ್ಮ ಚಿಂತನೆಯಲ್ಲಿ ಸೊಕ್ಕು (arrogance) ಹಾಗೂ ಪೆಟಿಬೂರ್ಶ್ವಾ ಅಹಂಭಾವ ಬಹಳ ಪ್ರಬಲವಾಗಿದ್ದು, "ನಾವು ಯಾರಿಗಿಂತಲೂ ಕಡಿಮೆಯಿಲ್ಲ" ಎಂಬ ರೂಪದಲ್ಲಿ ಅಭಿವ್ಯಕ್ತವಾಗಿತ್ತು. ಇದೊಂದು ಅತ್ಯಂತ ಅಪಾಯಕಾರಿ ಪ್ರವೃತ್ತಿ. ಪೆಟಿಬೂರ್ಶ್ವಾ ವರ್ಗತಳಹದಿ ಇದರ ಮೂಲ. ಈ ಪ್ರವೃತ್ತಿಯಿಂದಾಗಿ, ನಮ್ಮಲ್ಲಿರಬೇಕಾಗಿದ್ದ ಹಾಗೂ ಪರಸ್ಪರ ಘರ್ಷಣೆಗಳ ಈ ಗಂಭೀರ ವಿಚಾರವನ್ನು ಬಗೆಹರಿಸಲು ಅಗತ್ಯವಾಗಿದ್ದ ಪ್ರಾಮಾಣಿಕತೆಯ ಮತ್ತು ಹೊಂದಾಣಿಕೆಪರತೆ(Flexibility)ಯ ಸ್ಫೂರ್ತಿ ಇಲ್ಲವಾಯಿತು.

ii) ನಮ್ಮೆರಡೂ ಸಂಘಟನೆಗಳ ನಡುವಿನ ಸಂಬಂಧಗಳ ವಿಚಾರಕ್ಕೆ ಸಂಬಂಧಪಟ್ಟ ನಮ್ಮ ಅಪ್ರೋಚ್‌ನಲ್ಲಿ ಸಂಕುಚಿತವಾದ ಬಹುಮಟ್ಟಿಗೆ ಅಸ್ತಿತ್ವದಲ್ಲಿತ್ತು. ಇದರ ಜೊತೆಗೆ, ರಾಜಕೀಯ ಕ್ಷೇತ್ರದಲ್ಲಿ ಮನೋನಿಷ್ಠವಾದ ಮತ್ತು ನಿರ್ದಿಷ್ಟವಾಗಿ ಏಕಪಕ್ಷೀಯತೆ ಕೂಡ ನಮ್ಮ ಚಿಂತನೆಯಲ್ಲಿ ಸೇರಿಕೊಂಡಿದ್ದವು. ಪೆಟಿಬೂರ್ಶ್ವಾ ವರ್ಗಮೂಲವೇ ಈ ಚಿಂತನೆಗಳಿಗೆ ಕೂಡ ಮೂಲವಾಗಿದೆ.

ಕಾಮ್ರೇಡ್ಸ್, ನಮ್ಮೆರಡು ಸಂಘಟನೆಗಳ ನಡುವಿನ ಈ ಕರಾಳ ಅಧ್ಯಾಯದ ಸಮಸ್ಯೆಯನ್ನು ಸಕಾಲದಲ್ಲಿ ಪರಿಹರಿಸುವಲ್ಲಿನ ನಮ್ಮ ವಿಫಲತೆಗಾಗಿ ನಾವು ಮನಃಪೂರ್ವಕವಾಗಿ ಹಾಗೂ ತೆರೆದ ಮನಸ್ಸಿನಿಂದ ನಮ್ಮ ದುಃಖ ಮತ್ತು ಪಶ್ಚಾತ್ತಾಪಗಳನ್ನು ವ್ಯಕ್ತಪಡಿಸುತ್ತಿದ್ದೇವೆ. ಈ ಘರ್ಷಣೆಗಳ ಕಾಲಾವಧಿಯಲ್ಲಿ ತಮ್ಮ ಪ್ರಾಣಗಳನ್ನು ಕಳೆದುಕೊಂಡವರ ಕುಟುಂಬದವರಿಗೂ ಅಂಗಾಂಗಗಳನ್ನು ಅಥವಾ ಆಸ್ತಿಪಾಸ್ತಿಯನ್ನು ಕಳೆದುಕೊಂಡವರಿಗೂ ಅದೇ ಸ್ಫೂರ್ತಿಯೊಂದಿಗೆ ನಮ್ಮ ದುಃಖವನ್ನು ವ್ಯಕ್ತಪಡಿಸುತ್ತಿದ್ದೇವೆ. ಈ ಅತ್ಯಂತ ನೋವಿನ ಅಧ್ಯಾಯದ ಬಗೆಗೆ ನಮ್ಮ ಮನಸ್ಸು ಹೃದಯಗಳು ಈಗಲೂ ಆತ್ಮನಿಂದೆ(self-reproach)ಯಿಂದ ಮತ್ತು ಅತ್ಯಂತ ಆಳವಾದ ನೋವಿನಿಂದ ಮಿಡಿಯುತ್ತಿವೆ ಹಾಗೂ ರಕ್ತಸಿಕ್ತ ಕಲೆಗಳು ಇನ್ನೂ ಉಳಿದುಕೊಂಡಿವೆ.

ಆದ್ದರಿಂದ ನಾವು ಕೇವಲ ಒಂದು ಬಹಿರಂಗ ಆತ್ಮವಿಮರ್ಶೆಯನ್ನು ಲಿಖಿತ ರೂಪದಲ್ಲಿ ಮುಂದಿಟ್ಟರೆ ಮಾತ್ರ ಸಾಲದು. ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಈ ಆತ್ಮವಿಮರ್ಶೆಯನ್ನು ವಾಸ್ತವಿಕ ಆಚರಣೆಗಿಳಿಸುವ ಮೂಲಕ ನಮ್ಮನ್ನು ತಿದ್ದುಪಡಿ ಮಾಡಿಕೊಳ್ಳಬೇಕಿದೆ. ಈ ಆತ್ಮವಿಮರ್ಶೆ ಪ್ರಕ್ರಿಯೆಯನ್ನು ಆಚರಣೆಯಲ್ಲಿ ತರುತ್ತೇವೆ ಹಾಗೂ ಕ್ರಾಂತಿಕಾರಿ ಮತ್ತು ಸೈದ್ಧಾಂತಿಕ ಸಂಘರ್ಷಗಳ ಕುಲುಮೆಯೊಳಗೆ ನಮ್ಮನ್ನು ನಾವು ಈ ದಿಕ್ಕಿನಲ್ಲಿ ಉಕ್ಕಿನಂತೆ ಇನ್ನಷ್ಟು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುತ್ತಾ ಹೋಗಿಗುತ್ತೇವೆ ಎಂಬ ದೃಢ ವಿಶ್ವಾಸ ನಮಗಿದೆ.

ಕಾಮ್ರೇಡ್ಸ್, ಕಳೆದ ಆರೇಳು ವರ್ಷಗಳಲ್ಲಿ ನಾವು ಅನೇಕ ಸಂಗಾತಿಗಳನ್ನು ಕಳೆದುಕೊಂಡು ಅದರಿಂದ ಹಲವು ಅಮೂಲ್ಯ ಪಾಠಗಳನ್ನು ಕಲಿತಿದ್ದೇವೆ. ಒಂದೆಡೆ, ತೀಕ್ಷ್ಣವಾದ ವರ್ಗಯುದ್ಧದ, ಅಂದರೆ ವ್ಯವಸಾಯಿಕ ಕ್ರಾಂತಿಕಾರಿ ಗೆರಿಲ್ಲಾಯುದ್ಧ ಮತ್ತು ಪ್ರಜಾಯುದ್ಧದ ಕ್ರಮಗತಿಯಲ್ಲಿ ನಾವು ಹಲವಾರು ಏರಿಳಿತಗಳನ್ನು ಎದುರಿಸಿದ್ದೇವೆ; ಅದೇ ಪ್ರಕ್ರಿಯೆಯಲ್ಲಿ ಮತ್ತೊಂದೆಡೆ ಬಾದಲ್ ಮತ್ತು ಭರತ್ ಕೂಟದ ವಿರುದ್ಧ ನಾವು ತೀಕ್ಷ್ಣವಾದ ಸೈದ್ಧಾಂತಿಕ ಮತ್ತು ವಾಸ್ತವಿಕ ಸಂಘರ್ಷಗಳನ್ನೂ ನಡೆಸಿದ್ದೇವೆ. ಈ ಪ್ರಕ್ರಿಯೆಯ ಮೂಲಕ ನಾವು ಕಲಿತ ಅನೇಕ ಪಾಠಗಳು ನಮ್ಮನ್ನು ನಾವು ಬದಲಿಸಿಕೊಳ್ಳುವಲ್ಲಿ ಗಣನೀಯ ಪ್ರಮಾಣದಲ್ಲಿ ಸಹಾಯಕವಾದವು. ಸದ್ಯದಲ್ಲೇ ಸಿಪಿಐ(ಎಂಎಲ್) ಮತ್ತು ಎಂಸಿಸಿಐ ಈ ಎರಡೂ ಧಾರೆಗಳು ಮತ್ತೊಂದು ದೊಡ್ಡ ಧಾರೆಯಾಗಿ ವಿಲೀನಗೊಂಡಾಗ, ಕ್ರಾಂತಿಕಾರಿ ಹೋರಾಟದ ಕುದಿವ ಕುಲುಮೆಯೊಳಗೆ ನಾವೆಲ್ಲರೂ ನಮ್ಮನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಖಂಡಿತ ಸಾಧ್ಯವಾಗುತ್ತದೆ. ಈ ಜಗತ್ತನ್ನು ಬದಲಿಸುವುದಕ್ಕಾಗಿನ ವರ್ಗಸಂಘರ್ಷದ ದಳ್ಳುರಿಯೊಂದಿಗೆ ನಾವು ಅತ್ಯಂತ ನಿಕಟವಾಗಿ ಬೆರೆತಿರುವುದು ಹಾಗೂ ಮೇಲ್ಕಂಡ ಗುಣಪಾಠಗಳಿಂದಾಗಿ ನಾವು ಅನೇಕ ತಪ್ಪು ಪ್ರವೃತ್ತಿಗಳನ್ನು ಬಿಟ್ಟುಕೊಟ್ಟು ನಮ್ಮನ್ನು ಪರಿವರ್ತಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ ಎಂಬುದು ನಿಚ್ಚಳವಾಗಿದೆ; ಆದ್ದರಿಂದ ನಾವು ಇನ್ನು ಮುಂದೆಯೂ ಕೂಡ ಇದಕ್ಕಿಂತಲೂ ಉತ್ತಮ ಕಮ್ಯೂನಿಸ್ಟರಾಗುವ ಪ್ರಕ್ರಿಯೆಯಲ್ಲಿ ಮುನ್ಮುಂದೆ ಸಾಗುತ್ತಲೇ ಇರುತ್ತೇವೆಂದು ಪ್ರತಿಜ್ಞೆ ಮಾಡುತ್ತಿದ್ದೇವೆ.

*ಕಾಮ್ರೇಡ್ಸ್,*

ನಮ್ಮ ಪ್ರೀತಿಪಾತ್ರ ಸಂಸ್ಥಾಪಕ ನಾಯಕರೂ ಶಿಕ್ಷಕರೂ ಆದ ದಿವಂಗತ ಕಾಮ್ರೇಡ್ಸ್ ಕನಾಯ್ ಚಟರ್ಜಿ, ಅಮೂಲ್ಯ ಸೇನ್ ಮತ್ತು ಚಂದ್ರಶೇಖರ ದಾಸ್ ಅವರುಗಳು ಸರಳ ಜೀವನ-ಕಠಿಣ ಶ್ರಮ, ನಮ್ರತೆ, ನಿರಾಡಂಬರ ಹಾಗೂ ಸಹನೆಗಳ ಕಮ್ಯೂನಿಸ್ಟ್ ಗುಣಗಳನ್ನು ಪರಿಪೂರ್ಣವಾಗಿ ಮೈಗೂಡಿಸಿಕೊಂಡಿದ್ದರು; ಅವರ ಆ ಜೀವನಶೈಲಿಯು ನಮ್ಮ ಮುಂದಿರುವ ಉಜ್ವಲವಾದ ಉದಾಹರಣೆಯಾಗಿದೆ. ಆದರೆ ನಾವು ನಮ್ಮೆದುರಿನ ಈ ಉಜ್ವಲ ಪರಂಪರೆಯನ್ನು ಯಾವಾಗಲೂ ಅನುಸರಿಸುವಲ್ಲಿ, ಕಡೇಪಕ್ಷ ಕೆಲವು ಸಮಯಗಳಲ್ಲಿ ಹಾಗೂ ಒಂದು ಮಟ್ಟಿಗಾದರೂ ವಿಫಲವಾಗಿದ್ದೇವೆ. ಇದಕ್ಕಾಗಿ ಕೂಡ ನಾವು ಕ್ರಾಂತಿಕಾರಿ ಶ್ರೇಣಿಗಳು ಹಾಗೂ ಜನತೆಯೆದುರು ನಮ್ಮ ಆಳವಾದ ವಿಷಾದವನ್ನು ಹಾಗೂ ದುಃಖವನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದೇವೆ.

ಕೊನೆಯಲ್ಲಿ ನಾವು ಹೇಳುವುದೆಂದರೆ, ಎಂಸಿಸಿಐ ಪಕ್ಷದ ಸಂಸ್ಥಾಪಕ ನಾಯಕರ ಅರ್ಹ ಶಿಷ್ಯರಾಗಲು ನಾವು ಶಕ್ತಿಮೀರಿ ಶ್ರಮಿಸುವುದಲ್ಲದೆ, ಕಾ. ಕನಾಯ್ ಚಟರ್ಜಿ ಮತ್ತು ಕಾ. ಚಾರು ಮಜುಂದಾರ್ ಅವರೂ ಸೇರಿದಂತೆ ನಮ್ಮ ಎಲ್ಲಾ ಬೋಧಕರ ಸಮರ್ಥ ವಾರಸುದಾರರಾಗಲು ಕೂಡ ನಾವು ಕಷ್ಟಪಟ್ಟು ಶ್ರಮಿಸುತ್ತೇವೆಂದು ಮಾತು ಕೊಡುತ್ತೇವೆ. ಅದೇ ವೇಳೆ ನಾವು ವಿಮರ್ಶೆ-ಆತ್ಮವಿಮರ್ಶೆ ಮೂಲಕ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವಲ್ಲಿ ಹಾಗೂ ಮಾಲೆಮಾವಾದದ ಆಧಾರದಲ್ಲಿ ಮತ್ತು ಅದರ ಬೆಳಕಿನಲ್ಲಿ ಮುನ್ಸಾಗುವುದರಲ್ಲಿ ದೃಢವಾಗಿರುತ್ತೇವೆ ಎಂದೂ ಮಾತು ಕೊಡುತ್ತೇವೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ**

**ಕೇಂದ್ರ ಸಮಿತಿ**

**23.5.2004** **ಮಾವೋಯಿಸ್ಟ್ ಕಮ್ಯೂನಿಸ್ಟ್ ಸೆಂಟರ್ ಆಫ್ ಇಂಡಿಯ (ಎಂಸಿಸಿಐ)**

# ಎಂಸಿಸಿಐಯೊಂದಿಗಿನ ವಿಷಮಗೊಂಡ ಸಂಬಂಧಗಳನ್ನು ಕುರಿತು
# ಸಿಪಿಐ (ಮಾಲೆ) (ಪೀವಾ) ಕೇಂದ್ರ ಸಮಿತಿಯ ಆತ್ಮವಿಮರ್ಶೆ

ಭಾರತದ ಮೂರು ಮುಖ್ಯ ಕ್ರಾಂತಿಕಾರಿ ಪಕ್ಷಗಳಾದ ಪೀವಾ, ಎಂಸಿಸಿಐ ಮತ್ತು ಪಿಯೂ ನಡುವೆ 1970ರ ದಶಕದ ಕೊನೆ ಹಾಗೂ 1980ರ ದಶಕದ ಆರಂಭದಿಂದಲೂ ಬಹಳ ದೀರ್ಘ ಕಾಲ ಸೌಹಾರ್ದಯುತ ಸಂಬಂಧಗಳೇ ಇದ್ದವು. 1970ರ ದಶಕದ ಕೊನೆಯ ಹೊತ್ತಿಗೆ ಪಿಯೂ ಪಕ್ಷವು ಎಂಸಿಸಿಯೊಂದಿಗೆ ಹಾಗೂ ನಂತರ ಸಿಪಿಐ (ಎಂಎಲ್) ಆಂಧ್ರಪ್ರದೇಶ ರಾಜ್ಯ ಸಮಿತಿಯೊಂದಿಗೆ (ಇದು 1980ರಲ್ಲಿ ರಚನೆಯಾದ ಸಿಪಿಐ (ಎಂಎಲ್) (ಪೀವಾ) ಪಕ್ಷದ ಪ್ರಮುಖ ಘಟಕವಾಗಿತ್ತು.) ಸಂಪರ್ಕ ಸಾಧಿಸಲು ಮತ್ತು ಐಕ್ಯತೆಯ ಮಾತುಕತೆಗಳನ್ನು ನಡೆಸಲು ಪ್ರಯತ್ನಗಳನ್ನು ಆರಂಭಿಸಿತು. ಮೂರು ಪಕ್ಷಗಳೂ ಸಹ ಮಾಲೆಮಾವಾದವನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅಳವಡಿಸಿ, ಭಾರತದಲ್ಲಿ ಸುದೀರ್ಘ ಪ್ರಜಾಸಮರವನ್ನು ಬೆಳೆಸಲು ಗಂಭೀರ ಪ್ರಯತ್ನಗಳನ್ನು ನಡೆಸಿದವು. ಅವು ಆಧುನಿಕ ಪರಿಷ್ಕರಣವಾದದ ವಿರುದ್ಧ ಮತ್ತು ಕ್ರಾಂತಿಕಾರಿ ಶಿಬಿರದೊಳಗಿನ ಎಡ ಮತ್ತು ಬಲ ಅಡ್ಡತಿರುವುಗಳ ವಿರುದ್ಧ ನಿರಂತರ ಸಂಘರ್ಷ ನಡೆಸಿದವು. ಹಾಗೂ ಕ್ರಮವಾಗಿ ಕಾ. ಸಿಎಂ ಮತ್ತು ಕಾ. ಕೆಸಿ ಅವರ ಕ್ರಾಂತಿಕಾರಿ ಪಥಗಳನ್ನು ಎತ್ತಿಹಿಡಿಯುತ್ತಾ ಬಂದವು. ಮೊದಲಿನ ಕಾಲಾವಧಿಯಲ್ಲಿ ಎಂಸಿಸಿ ಪ್ರಧಾನ ಕಾರ್ಯದರ್ಶಿ ಕಾ. ಕೆಸಿ, ಈ ಹಿಂದಿನ ಪಿಯೂ ನಾಯಕತ್ವ ಹಾಗೂ ಪೀವಾದ ಹಿಂದಿನ ಕಾರ್ಯದರ್ಶಿ ಕಾ. ಕೆಎಸ್ ಇವರುಗಳು ಈ ಪಕ್ಷಗಳನ್ನು ಹತ್ತಿರಕ್ಕೆ ತರುವಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸಿದರು. ಮೂರು ಪಕ್ಷಗಳೂ ಸಹ ಸುದೀರ್ಘ ಪ್ರಜಾಸಮರದ ಮೂಲಕ ರಾಜಕೀಯ ಅಧಿಕಾರ ಗ್ರಹಣಕ್ಕಾಗಿ ನಕ್ಸಲ್‌ಬರಿಯ ಪಥವನ್ನು ಮುನ್ನಾಗಿಸಲು ಪ್ರಯತ್ನಿಸಿದವು. ಫಲಿತಾಂಶವಾಗಿ, ಮೂರು ಪಕ್ಷಗಳೂ ಭಾರತದ ಕ್ರಾಂತಿಯ ಪ್ರಮುಖ ಮುಂಚೂಣಿ ಸಂಘಟನೆಗಳಾಗಿ ಹೊರಹೊಮ್ಮಿದವು. ನಮ್ಮ ಪಕ್ಷ ಮತ್ತು ಎಂಸಿಸಿ ಇವೆರಡೂ ಭಾರತದ ಮಾವೊವಾದಿ ಚಳುವಳಿಯ ಎರಡು ವಿಭಿನ್ನ ಧಾರೆಗಳಿಗೆ ಸೇರಿದ್ದರೂ ಸಹ, ಎರಡು ಪಕ್ಷಗಳೂ ದೇಶದೊಳಗೆ ಸಶಸ್ತ್ರ ಹೋರಾಟವನ್ನು ಮುನ್ನಾಗಿಸುವ ಕಡೆ ಗಮನ ಕೇಂದ್ರೀಕರಿಸಿದವು. ದೇಶದಲ್ಲಿ ಮುನ್ನಾಗುತ್ತಿರುವ ಕ್ರಾಂತಿಕಾರಿ ಯುದ್ಧದ ಬಹುಪಾಲು ಕಾಲಾವಧಿಯುದ್ದಕ್ಕೂ **ಮೂರೂ ಪಕ್ಷಗಳ ನಡುವೆ ಕಾರ್ಮಿಕ ವರ್ಗದ ತತ್ವಗಳು ಮತ್ತು ಮಾಲೆಮಾವಾದದ ಆಧಾರದಲ್ಲಿ ಸೌಹಾರ್ದಯುತ ಮತ್ತು ಸಂಗಾತಿ(comradely) ಸಂಬಂಧಗಳು ಅಸ್ತಿತ್ವದಲ್ಲಿದ್ದವು.** ಪರಸ್ಪರ ಐಕ್ಯಗೊಂಡು ಭಾರತದಲ್ಲೊಂದು ಐಕ್ಯ ಕ್ರಾಂತಿಕಾರಿ ಕಾರ್ಮಿಕ ವರ್ಗದ ಪಕ್ಷವನ್ನು ನಿರ್ಮಿಸಲು ಮೂರು ಪಕ್ಷಗಳೂ ಸಹ ಗಂಭೀರ ಪ್ರಯತ್ನಗಳನ್ನು ನಡೆಸಿದವು.

ಈ ಆತ್ಮವಿಮರ್ಶೆಯು 2001ರಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆಗಳ ವೇಳೆ ಮೊದಲಿಗೆ ಮಂಡಿಸಿ ನಂತರ ಪಕ್ಷದ ಶ್ರೇಣಿಗಳ ಕೆಳಗಿನವರೆಗೂ ಜನಸಮೂಹದ ನಡುವೆಯೂ ಕೊಂಡೊಯ್ಯಲಾದ ಆತ್ಮವಿಮರ್ಶೆಯ ಮುಂದುವರಿಕೆಯಾಗಿದೆ. 2001ರಲ್ಲಿ ಅದು ಘರ್ಷಣೆಗಳನ್ನು ನಿಲ್ಲಿಸುವ ಉದ್ದೇಶದೊಂದಿಗೆ ತಕ್ಷಣಕ್ಕೆ ನಡೆಸಿದ ಆತ್ಮವಿಮರ್ಶೆಯಾಗಿತ್ತು. 2003ರಲ್ಲಿ ವಿಸ್ತೃತವಾದ ಚರ್ಚೆಗಳ ನಂತರ ಎರಡೂ ಸಿಸಿಗಳು ಹೆಚ್ಚು ವಿವರವಾದ ಮತ್ತು ಗಂಭೀರವಾದ ಆತ್ಮವಿಮರ್ಶೆಯನ್ನು ಸಭೆಯ ಮುಂದಿಟ್ಟವು ಹಾಗೂ ಅದರ ಸಾರಾಂಶವನ್ನು ಒಂದು ಕರಪತ್ರದ ರೂಪದಲ್ಲಿ ಜನಸಮೂಹದ ನಡುವೆ ಕೊಂಡೊಯ್ಯಲಾಯಿತು. ನಾವು ನಮ್ಮ ಆತ್ಮವಿಮರ್ಶೆಯನ್ನು ಇಲ್ಲಿ ಬರಹ ರೂಪದಲ್ಲಿ ಮಂಡಿಸುತ್ತಿದ್ದೇವೆ.

ಬಿಹಾರ-ಝಾರ್ಖಂಡ್ ರಾಜ್ಯಗಳಲ್ಲಿ ಹಿಂದಿನ ಪಿಯೂ ಮತ್ತು ಎಂಸಿಸಿ ನಡುವೆ ಉದ್ವಿಗ್ನತೆ ಹುಟ್ಟಿ ಬೆಳೆಯಲು ಈ ಕೆಳಗಿನ ವಿಚಾರಗಳು ಪ್ರಾಥಮಿಕ ಕಾರಣಗಳಾಗಿದ್ದವು: ಮೊದಲನೆಯದಾಗಿ, ಒಂದೇ ಪ್ರದೇಶದಲ್ಲಿ ಕೆಲಸ ಮಾಡುವಾಗ, ಜನತೆಯ ನಡುವಿನ ವೈರುಧ್ಯಗಳನ್ನು ನಿರ್ವಹಿಸುವಾಗಿನ ಹಾಗೂ ಆಚರಣೆಯ ಕಾಲಾವಧಿಯಲ್ಲಿ ಹುಟ್ಟಿಬರುವ ಸಮಸ್ಯೆಗಳನ್ನು ನಿಭಾಯಿಸುವಾಗಿನ ಅಪ್ರೋಚ್; ಎರಡನೆಯದಾಗಿ, ಎರಡೂ ಪಕ್ಷಗಳ ನಡುವೆ ಇದ್ದ ಹಾಗೂ ವಿವಿಧ ಆಚರಣೆಗಳಲ್ಲಿ ಪ್ರತಿಫಲಿತವಾಗಿದ್ದ ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳು. ಇದೆಲ್ಲವೂ ಎರಡೂ ಪಕ್ಷಗಳ ನಡುವೆ 1991ರಿಂದ ಉದ್ವಿಗ್ನತೆ ಬೆಳೆಯಲು ಕಾರಣವಾಗಿ 2001ರವರೆಗೂ ಪರಸ್ಪರರನ್ನು ಕೊಲ್ಲುತ್ತಾ ಬಂದುದಕ್ಕೆ ಆರಂಭ ಬಿಂದುವಾಯಿತು. ಈ ಸಮಸ್ಯೆಗಳನ್ನು ಸಕಾಲದಲ್ಲಿ ಪರಿಹರಿಸದ ಕಾರಣ ಈ ಉದ್ವಿಗ್ನತೆಗಳು ಉಲ್ಬಣಗೊಂಡು 1996ರ ವೇಳೆಗೆ ರಕ್ತಪಾತ, ಕೊಲೆಗಳು, ಬೆಂಕಿ ಹಚ್ಚುವಿಕೆ ಮುಂತಾದವುಗಳಲ್ಲಿ ಪರ್ಯವಸಾನಗೊಂಡವು. ಮುಂದೆ, ನಮ್ಮೆರಡು ಪಕ್ಷಗಳೂ ಹತ್ತಿರವಾಗಿ ವಿಲೀನದ ಮಾತುಕತೆಗಳನ್ನು ಆರಂಭಿಸಿದ ಸಂದರ್ಭದಲ್ಲಿ ಕೂಡ, ಜಂಟಿ ಸಭೆಗಳ ನಿರ್ಣಯಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಹಾಗೂ ನಮ್ಮ ಕಾರ್ಯಕರ್ತ ಶ್ರೇಣಿಗಳಿಗೆ ಒಂದು ವರ್ಗದೃಷ್ಟಿಕೋನವನ್ನು ನೀಡುವುದರಲ್ಲಿ ನಮ್ಮ ನಾಯಕತ್ವದ ಕಡೆಯಿಂದಾದ ಕೊರತೆಯಿಂದಾಗಿ ಬೆದರಿಕೆ ಮತ್ತು ನಿರ್ಮೂಲನದ ಕೆಲವು ಬಿಡಿಬಿಡಿ ಘಟನೆಗಳು ಅಲ್ಲಲ್ಲಿ ಸಂಭವಿಸಿದವು. ನಮ್ಮ (1997ರವರೆಗೆ ಹಿಂದಿನ ಪಿಯೂ ಹಾಗೂ ಮುಂದೆ ಪೀವಾದ) ಈ ತಪ್ಪು ಅಪ್ರೋಚ್‌ನಿಂದಾಗಿ ನಮ್ಮದೇ ವರ್ಗಸೋದರರ ರಕ್ತಪಾತ ಸಂಭವಿಸಿತು; ನಮ್ಮ ಸ್ವಂತದ ತಪ್ಪುಗಳನ್ನು ತಿದ್ದುಪಡಿ ಮಾಡಿಕೊಳ್ಳುವಲ್ಲಿ ಸರಿಯಾದ ಲೆನಿನ್‌ವಾದಿ ಕಾರ್ಯಶೈಲಿಯನ್ನೂ ಮಾವೊವಾದಿ ಮಾರ್ಗದರ್ಶನಗಳನ್ನೂ ಅಳವಡಿಸಿಕೊಂಡಿದ್ದರೆ, ಇದನ್ನು ತಪ್ಪಿಸಲು ಸಾಧ್ಯವಿತ್ತು. ಅದರ ಬದಲು ನಾವು ಸಹಾನುಭೂತಿಪರರನ್ನು ಮತ್ತು ಕೆಳಹಂತದ ಕಾರ್ಯಕರ್ತರನ್ನು ಕೊಲ್ಲುವುದು, ಗ್ರಾಮೀಣ ಜನಸಮೂಹದ ಮನೆಗಳ ನೆಲಸಮ ಹಾಗೂ ಅವರ ಆಸ್ತಿಪಾಸ್ತಿಗಳನ್ನು ನಾಶಪಡಿಸುವುದು-ಇಂತಹ ವಿಧಾನಗಳನ್ನು ಅನುಸರಿಸಿದೆವು. ಹೆಚ್ಚೂಕಮ್ಮಿ ಅರ್ಧ ದಶಕದ ಕಾಲ ಈ ಪ್ರದೇಶದ ಜನರು ಎರಡೂ ಕಡೆಗಳ ಘರ್ಷಣೆಗಳ ಕಾರಣ ಅತ್ಯಂತ ಭಯದ ವಾತಾವರಣದಲ್ಲಿ ಜೀವಿಸುವಂತಾಯಿತು. ಇದರ ಗಂಭೀರ ಪರಿಣಾಮಗಳನ್ನು ನಾವು ಸಕಾಲದಲ್ಲಿ ಗ್ರಹಿಸಲಿಲ್ಲ. **ಸಿಪಿಐ (ಎಂಎಲ್) (ಪೀವಾ) ಕೇಂದ್ರ ಸಮಿತಿಯು ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ತನ್ನ ಕಡೆಯಿಂದಾದ ಲೋಪಗಳಿಗಾಗಿ, ಹಾಗೂ, ಸಂಕುಚಿತ ಹಿತಾಸಕ್ತಿ, ಕಾರ್ಮಿಕ ವರ್ಗ ನಿಲುವಿನಿಂದ ಬದಿಗೆ ಸರಿಯುವಿಕೆ, ಬೋಲ್ಶೆವಿಕ್ ಮಾದರಿಯನ್ನು ಆಧರಿಸಿ ಎಂಸಿಸಿಐಯೊಂದಿಗಿನ ಮಿತ್ರವೈರುಧ್ಯಗಳನ್ನು ಪರಿಹರಿಸಿಕೊಳ್ಳುವ ವಿಚಾರದಲ್ಲಿ ನೀತಿಸೂತ್ರಗಳನ್ನು ಕಡೆಗಣಿಸುವಿಕೆ - ಇಂತಹ ವಿಷಯಗಳಲ್ಲಿ ತನ್ನಕಡೆಯಿಂದಾದ ತಪ್ಪುಗಳಿಗಾಗಿ, ತನ್ನ ಪಾಲಿನ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತದೆ.**

ಬಿಹಾರ-ಝಾರ್ಖಂಡ್‌ಗಳಲ್ಲಿ ಸಂಭವಿಸಿದ ವಿಷಮ ಸಂಬಂಧಗಳ ಕಾಲಾವಧಿಯಲ್ಲಿ ನಮ್ಮೆರಡೂ ಪಕ್ಷಗಳ ನಡುವಿನ ಘರ್ಷಣೆಗಳನ್ನು ನಾವು ಹೆಚ್ಚಾಗಿ ಸ್ಥಳೀಯ ದೃಷ್ಟಿಕೋನದಿಂದ ನಿರ್ವಹಿಸಿದೆವು ಹೊರತು, **ಅದು ಭಾರತದ ಕ್ರಾಂತಿಯ ದೀರ್ಘಕಾಲೀನ ಹಿತಾಸಕ್ತಿಗಳ ಮೇಲೆ ಹಾಗೂ ನಮ್ಮೆರಡೂ ಪಕ್ಷಗಳ ನಡುವಿನ ಒಟ್ಟಾರೆ ಸೌಹಾರ್ದ ಸಂಬಂಧಗಳ ಮೇಲೆ ಉಂಟುಮಾಡಬಹುದಾದ ನಕಾರಾತ್ಮಕ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ.**

ಮುಂದೆ ಆಗಸ್ಟ್ 1998ರಲ್ಲಿ ಈ ಹಿಂದಿನ ಪೀವಾ ಮತ್ತು ಪಿಯೂ ಒಂದೇ ಪಕ್ಷವಾಗಿ ವಿಲೀನಗೊಂಡ ನಂತರ, ಹಂಗಾಮಿ ಕೇಂದ್ರ ಸಮಿತಿಯು ತನ್ನ ಮೊತ್ತಮೊದಲ ಸಭೆಯಲ್ಲೇ ಎಂಸಿಸಿಐ ವಿರುದ್ಧ ಎಲ್ಲಾ ರೀತಿಯ ಕಾರ್ಯಾಚರಣೆಗಳನ್ನು ಹಾಗೂ ಈಗಾಗಲೇ ಉದ್ವಿಗ್ನಗೊಂಡಿರುವ ವಾತಾವರಣವನ್ನು ಮತ್ತಷ್ಟು ಉಲ್ಬಣಗೊಳಿಸಬಹುದಾದ ಎಲ್ಲಾ ರೀತಿಯ ಪ್ರಚಾರಗಳನ್ನು ಏಕಪಕ್ಷೀಯವಾಗಿ ನಿಲ್ಲಿಸಲು ನಿರ್ಣಯವೊಂದನ್ನು ಅಂಗೀಕರಿಸಿತು. ಪ್ರಾಥಮಿಕವಾಗಿ ಈ ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದ ಬಿಹಾರ ರಾಜ್ಯ ಸಮಿತಿಗೆ ಸಹ ಈ ವಿಚಾರದಲ್ಲಿ ಹಂಗಾಮಿ ಕೇಂದ್ರ ಸಮಿತಿ ಮನವರಿಕೆ ಮಾಡಿಕೊಟ್ಟಿತು. ಆದರೆ ಈ ನಿರ್ಧಾರವನ್ನು ಬಿಹಾರ ಮತ್ತು ಝಾರ್ಖಂಡ್‌ನ ಪತ್ರಿಕೆಗಳಿಗೆ ಹಾಗೂ ಇತರ ಸೋದರ ಕ್ರಾಂತಿಕಾರಿ ಗುಂಪುಗಳಿಗೆ ತಿಳಿಸುವ ಮೂಲಕ ಪ್ರಚುರಪಡಿಸದಿದ್ದುದು ಮಾತ್ರವಲ್ಲ, ಸ್ವತಃ ಎಂಸಿಸಿ ಕೇಂದ್ರ ಸಮಿತಿಗೆ ಕೂಡ ತಿಳಿಸಲಿಲ್ಲ; ಇದು ನಮ್ಮ ಹಂಗಾಮಿ ಕೇಂದ್ರ ಸಮಿತಿಯ ಪ್ರಮುಖ ವೈಫಲ್ಯವಾಗಿತ್ತು. ಎರಡೂ ಪಕ್ಷಗಳ ನಡುವೆ ನಡೆಯಬೇಕಿದ್ದ ದ್ವಿಪಕ್ಷೀಯ ಸಭೆಗಳು ಈಡೇರದಿದ್ದುದು ಎಂಸಿಸಿಗೆ ಆ ನಿರ್ಧಾರವನ್ನು ತಿಳಿಸದಿರಲು ಒಂದು ಕಾರಣವಾದರೂ, ಈ ನಿರ್ಣಯವನ್ನು ಎಂಸಿಸಿಗೆ ತಲುಪಿಸದಿರುವುದರ ಜವಾಬ್ದಾರಿ ನಮ್ಮದೇ ಆಗಿದೆ. ಈ ಲೋಪದ ಪೂರ್ಣ ಹೊಣೆಯನ್ನು ನಾವು ಹೊತ್ತುಕೊಳ್ಳುತ್ತೇವೆ ಮತ್ತು ಅದಕ್ಕಾಗಿ ಆತ್ಮವಿಮರ್ಶೆ ಮಾಡಿಕೊಳ್ಳುತ್ತೇವೆ. ಬಿಹಾರ, ಝಾರ್ಖಂಡ್‌ನಲ್ಲಿ ರಕ್ತಪಾತಗಳು ಮತ್ತೆರಡು ವರ್ಷ ಮುಂದುವರಿದು ವಿನಾಶಕಾರಿ ಪರಿಣಾಮಗಳಿಗೆ ದಾರಿಯಾಗಲು ನಮ್ಮ ಈ ಲೋಪ ಕೊಡುಗೆ ನೀಡಿತು. ಆ ಹೊತ್ತಿನಲ್ಲಿ ನಾವು "ನಾವೇನು ಮಾಡಲು ಸಾಧ್ಯ? ನಾವು ಕೇವಲ ಆತ್ಮರಕ್ಷಣೆಗಾಗಿ ಪ್ರತಿದಾಳಿಯನ್ನಷ್ಟೇ ಮಾಡುತ್ತಿದ್ದೇವೆ" ಎಂಬಂತಹ ಅತ್ಯಂತ ಜವಾಬ್ದಾರಿರಹಿತ ನಿಲುವು ತಳೆದೆವು. **ಇದು ಸೋದರ ಪಕ್ಷವೊಂದರ ಬಗೆಗೆ ಇರಬೇಕಾದ ಕಾರ್ಮಿಕ ವರ್ಗ ನಿಲುವಿನಿಂದ ಗಂಭೀರವಾದೊಂದು ಅಡ್ಡಸರಿಯುವಿಕೆಯಾಗಿತ್ತು.**

ಬಿಹಾರ-ಝಾರ್ಖಂಡ್‌ನಲ್ಲಿ ಸುಮಾರು ಅರ್ಧ ದಶಕದ ಕಾಲ (1996-2001) ವರ್ಗಶತ್ರುವಿನ ವಿರುದ್ಧದ ವರ್ಗಹೋರಾಟಕ್ಕೆ ತೀವ್ರವಾದ ಹಾನಿಯುಂಟಾಯಿತು. ವಾಸ್ತವವಾಗಿ ಎರಡು ಪಕ್ಷಗಳೂ ಜಂಟಿಯಾಗಿ ಗೆರಿಲ್ಲಾ ಯುದ್ಧವನ್ನು ಮುನ್ನಡೆಸುವ ಮೂಲಕ ಶತ್ರುವಿನ ವಿರುದ್ಧ ಐಕ್ಯ ಹೋರಾಟ ನಡೆಸಬೇಕಿದ್ದ ಹೊತ್ತಿನಲ್ಲಿ ನಾವು ನಮ್ಮದೇ ಸಂಗಾತಿಗಳನ್ನು ಕೊಲ್ಲುವುದರಲ್ಲಿ ಮುಳುಗಿದ್ದೆವು ಹಾಗೂ ಯಾವಾಗಲೂ ತಪ್ಪನ್ನು ಇನ್ನೊಬ್ಬರ ಮೇಲೆಯೇ ಹೊರಿಸುತ್ತಿದ್ದೆವು. **ಅದು ಭಾರತದ ಕ್ರಾಂತಿಕಾರಿ ಕಮ್ಯೂನಿಸ್ಟ್ ಚಳುವಳಿಯ ಪಾಲಿಗೊಂದು ಕರಾಳ ಅಧ್ಯಾಯವಾಗಿತ್ತು.**

ಹಿಂದಿನ ಪಿಯೂ ಪಕ್ಷವು ಬಿಹಾರದಲ್ಲಿ ಕರಪತ್ರಗಳ ಮೂಲಕ ಒಂದಷ್ಟು ದ್ವೇಷಪೂರ್ಣ ಪ್ರಚಾರ ನಡೆಸಿತು ಹಾಗೂ ವಿಲೀನ ಮತ್ತು ಇಂದಿನ ಸಿಪಿಐ (ಎಂಎಲ್) (ಪೀವಾ) ರಚನೆಯ ನಂತರ ನಮ್ಮ ಮ್ಯಾಗಝಿನ್‌ಗಳು ಮತ್ತು ಇತರ ಪ್ರಚಾರ ಸಾಹಿತ್ಯಗಳಲ್ಲಿ ಎಂಸಿಸಿಐ ವಿರುದ್ಧ ತೀವ್ರ ನಿಂದಾತ್ಮಕ ಬರಹಗಳು ಪ್ರಕಟಗೊಂಡವು. ಎಂಸಿಸಿಐ ಕ್ರಾಂತಿಕಾರಿ ಶಿಬಿರದಲ್ಲಿದೆ ಎಂದು ನಾವು ಒಂದೆಡೆ ಹೇಳುತ್ತಲೇ ಇದ್ದೆವು; ಆದರೆ ಅದೇ ವೇಳೆ ಮತ್ತೊಂದೆಡೆ, ಎಂಸಿಸಿಐಯೊಳಗೆ ಅಧಃಪತನದ ಪ್ರಕ್ರಿಯೆಯೊಂದು ಪ್ರಾರಂಭವಾಗಿರುವುದಾಗಿಯೂ, ಅದು ಈಗ ಅವಲಂಬಿಸಲು ತೊಡಗಿರುವಂತಹ ವ್ಯಕ್ತಿಗಳ ಮೇಲೆ ಅವಲಂಬಿಸುವುದನ್ನು ನಿಲ್ಲಿಸದಿದ್ದರೆ ಹಾಗೂ ಅದು ಅಳವಡಿಸುತ್ತಿರುವ ಕಾರ್ಮಿಕ ವರ್ಗೇತರ ವಿಧಾನಗಳ ಅನುಸರಣೆಯನ್ನು ತಿದ್ದುಪಡಿ ಮಾಡಿಕೊಳ್ಳದಿದ್ದರೆ ಅದು ಕ್ರಾಂತಿಕಾರಿ ಶಿಬಿರದಿಂದ ದೂರ ಕೊಚ್ಚಿಕೊಂಡು ಹೋಗಲಿರುವುದಾಗಿಯೂ ನಾವು ನಮ್ಮ ಸಾಹಿತ್ಯದಲ್ಲಿ ಬರೆದೆವು. ಎಂಸಿಸಿ ಬಗ್ಗೆ ಒಂದು ಕಳಂಕಿತ ಚಿತ್ರಣ ನೀಡುವುದಕ್ಕಾಗಿ ಅದರ ಕೆಲವು ತಪ್ಪುಗಳನ್ನು ದೊಡ್ಡದಾಗಿ ಉತ್ಪ್ರೇಕ್ಷಿಸುವ ಇಂತಹ ತಪ್ಪು ಅಪ್ರೋಚ್ ಮೂಲಕ ನಾವು ಮೇಲ್ಕಂಡ ಅಂಶವನ್ನು ಸಾಬೀತುಪಡಿಸಲು ಯತ್ನಿಸಿದೆವು. ಎಂಸಿಸಿಯ ಒಟ್ಟಾರೆ ಕ್ರಾಂತಿಕಾರಿ ಸ್ವಭಾವವನ್ನು ಕಡೆಗಣಿಸಿದೆವು. ಇದು ಎಂಸಿಸಿಯ ಆಚರಣೆಯೊಂದಿಗೆ ನಾವು ಎರಡು ದಶಕಗಳ ಕಾಲ ನಿಕಟವಾಗಿ ಜೊತೆಗೂಡಿ ಇದ್ದಾಗ್ಯೂ ಸಹ, ದೂರಗಾಮಿ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳದಿರುವ ಮತ್ತು ಶತ್ರುಭಾವದ್ದಲ್ಲದ ವೈರುಧ್ಯಗಳನ್ನು ಶತ್ರುವೈರುಧ್ಯಗಳನ್ನಾಗಿ ನೋಡಿ ನಡೆದುಕೊಳ್ಳುವ ನಮ್ಮ ಪೆಟಿಬೂರ್ಶ್ವಾ ಸಮೀಪದೃಷ್ಟಿದೋಷವಾಗಿತ್ತು. ಇದು ಸನ್ನಿವೇಶವನ್ನು ಮತ್ತು ಸಮಸ್ಯೆಯನ್ನು ಅಸೆಸ್ ಮಾಡುವಲ್ಲಿ **ಮಾರ್ಕ್ಸ್‌ವಾದಿ ವಿಧಾನದಿಂದ ಬದಿಗೆ ಸರಿದುದರ** ಪರಿಣಾಮವಾಗಿತ್ತು ಹಾಗೂ ನಮ್ಮ ಪೆಟಿಬೂರ್ಶ್ವಾ ವರ್ಗಧೋರಣೆ (ಅಪ್ರೋಚ್) ಇದಕ್ಕೆ ಕಾರಣವಾಗಿತ್ತು.

ಎರಡೂ ಪಕ್ಷಗಳು ಅಳವಡಿಸಿಕೊಂಡಿದ್ದ ಪ್ರತೀಕಾರದ ವಿಧಾನವನ್ನು ಎರಡೂ ಕಡೆಯ ನಮ್ಮದೇ ವರ್ಗಸೋದರರು ವಿರೋಧಿಸಿದರೂ ಸಹ, ಕ್ರಾಂತಿಯನ್ನು ಬೆಂಬಲಿಸುವ ಬುದ್ಧಿಜೀವಿಗಳು ಮತ್ತು ಪ್ರಗತಿಪರ ವ್ಯಕ್ತಿಗಳು ಘರ್ಷಣೆಗಳಲ್ಲಿ ತೊಡಗದಿರುವಂತೆ ನಮಗೆ ಮನವಿ ಮಾಡಿದರೂ ಸಹ, ನಮ್ಮ ದೇಶದೊಳಗಿನ ಹಾಗೂ ವಿದೇಶಗಳ ವಿವಿಧ ಕ್ರಾಂತಿಕಾರಿ ಗುಂಪುಗಳು ಮತ್ತು ಮಾಲೆಮಾವಾದಿ ಪಕ್ಷಗಳು ಈ ಘರ್ಷಣೆಗಳನ್ನು ಪರಿಹರಿಸಿಕೊಂಡು ಭಾರತದ ಕ್ರಾಂತಿಯನ್ನು ಮುನ್ನಡೆಸಲು ಒಟ್ಟುಗೂಡಿ ಶ್ರಮಿಸುವಂತೆ ಮನವಿ ಮಾಡಿದರೂ ಸಹ, **ಆರಂಭದಲ್ಲಿ ನಾವು ಸ್ಪಂದಿಸಲಿಲ್ಲ.** 2000ದ ಜನವರಿಯಲ್ಲಿ ಎಂಸಿಸಿ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿದ್ದನ್ನು 2000ದ ಮಾರ್ಚ್‌ನಲ್ಲಿ ನಮ್ಮ ಸಿಸಿ ಸ್ವಾಗತಿಸಿತಾದರೂ ಈ ಘರ್ಷಣೆಗಳನ್ನು ಕೊನೆಗೊಳಿಸುವ ಹೊಣೆಯನ್ನು ಎಂಸಿಸಿಯ ಮೇಲೆ ಹೊರಿಸಿತು. ಇದು ನಮ್ಮ ಕಡೆಯಿಂದಾದ ಗಂಭೀರ ತಪ್ಪು. ಬಹಳಷ್ಟು ಹಾನಿ ಉಂಟಾದ ಮೇಲಷ್ಟೇ ನಾವು ಘರ್ಷಣೆಗಳನ್ನು ನಿಲ್ಲಿಸಿ ನಮ್ಮ ಸಂಬಂಧಗಳಲ್ಲಿ ಹೊಸದೊಂದು ಅಧ್ಯಾಯವನ್ನು ಆರಂಭಿಸಿದ್ದು; ಅದೀಗ ಭಾರತದ ಒಂದೇ ಕ್ರಾಂತಿಕಾರಿ ಪಕ್ಷವಾಗಿ ವಿಲೀನಗೊಳ್ಳುವುದರಲ್ಲಿ ಪರ್ಯವಸಾನ ಕಾಣುತ್ತಿದೆ. ಆ ಕಾಲಾವಧಿಯಲ್ಲಿ, ಆಗ ನಡೆಯುತ್ತಿದ್ದ ಘರ್ಷಣೆಗಳನ್ನು ಚರ್ಚೆಗಳ ಮೂಲಕ ನಿಲ್ಲಿಸಲು ಸಾಧ್ಯವಾಗುವಂತೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲು ಗಂಭೀರ ಪ್ರಯತ್ನಗಳನ್ನು ನಡೆಸದಿದ್ದುದಕ್ಕೆ ನಾವು ಕೂಡ ಜವಾಬ್ದಾರರು. **ಗಂಭೀರತೆಯ ಕೊರತೆ ಹಾಗೂ ಸಂಕುಚಿತವಾದ ಇದಕ್ಕೆ ಕಾರಣ.**

ಈ ನಿಟ್ಟಿನಲ್ಲಿ ನಮ್ಮ ನಿರ್ದಿಷ್ಟ ಆತ್ಮವಿಮರ್ಶೆ ಹೀಗಿದೆ:

1) ಈ ಕರಾಳ ಅಧ್ಯಾಯದಲ್ಲಿ ಸಂಭವಿಸಿದ ರಕ್ತಪಾತಕ್ಕೆ, ಸಾವಿರಾರು ಕುಟುಂಬಗಳಿಗೆ ಯಾತನಾವಿಹ್ವಲತೆಯನ್ನೂ (trauma) ಆರ್ಥಿಕ ನಷ್ಟವನ್ನೂ ಉಂಟುಮಾಡಿರುವುದಕ್ಕೆ, ಹಾಗೂ ಕ್ರಾಂತಿಕಾರಿ ಶಿಬಿರದೊಳಗೆ ನಮ್ಮ ಬಗ್ಗೆ ಒಂದು ಮಟ್ಟಿಗೆ ವಿಶ್ವಾಸದ ಕೊರತೆ ಉಂಟಾದುದಕ್ಕೆ ನಮ್ಮ ಪಾಲಿನ ಹೊಣೆಯನ್ನು ಹೊರುತ್ತೇವೆ. ಇನ್ನು ಮುಂದೆ **ಎಂದೆಂದೂ ನಮ್ಮ ವರ್ಗಸೋದರರ ವಿರುದ್ಧ ಇಂತಹ ಭ್ರಾತೃಹತ್ಯಾಕಾರಿ ದಾಳಿಗಳಿಗೆ ನಾವು ಇಳಿಯುವುದಿಲ್ಲವೆಂದು ಜನತೆಗೂ ಕ್ರಾಂತಿಕಾರಿ ಶಿಬಿರಕ್ಕೂ ಭರವಸೆ ಕೊಡುತ್ತೇವೆ.**

2) 1990ರ ದಶಕದ ಆರಂಭದಲ್ಲಿ ಕಾ. ಸತ್ಯನಾರಾಯಣ ಸಿಂಗ್‌ರನ್ನು ಕೊಂದುದು ಹಾಗೂ ನಮ್ಮ ಇನ್ನಿತರ ಕೆಲವು ತಪ್ಪುಗಳೂ ಸಹ ನಮ್ಮೆರಡು ಪಕ್ಷಗಳ ನಡುವಿನ ಸಂಬಂಧಗಳು ಕಹಿಯಾಗಲು ಕಾರಣವಾದವು. **ನಮ್ಮ ರಾಜಕೀಯ ದೌರ್ಬಲ್ಯ ಇದಕ್ಕೆ ಕಾರಣ.**

3) 1995ರಲ್ಲಿ ಬಿಹಾರದ ನಮ್ಮ ರಾಜ್ಯ ಸಮಿತಿಯು 'ಎಂಸಿಸಿಯನ್ನು ಅಳಿಸಿಹಾಕಿ' ಎಂದು ಕರೆಕೊಟ್ಟಿದ್ದರಲ್ಲಿನ ಗಂಭೀರ ಪ್ರಮಾದವನ್ನು ನಾವು ಆಳವಾಗಿ ಮನಗಂಡಿದ್ದೇವೆ. ಅದನ್ನು ಆಗಿನ ಕೇಂದ್ರ ಸಮಿತಿ ತಕ್ಷಣವೇ ಹಿಂತೆಗೆದುಕೊಂಡಿತಾದರೂ ಅದಾಗಲೇ ನಮ್ಮ ದ್ವಿಪಕ್ಷೀಯ ಸಂಬಂಧಗಳ ಮೇಲೆ ಕೆಟ್ಟ ಪ್ರಭಾವವನ್ನು ಉಂಟುಮಾಡಿತ್ತು. **ನಮ್ಮ ದುಡುಕುತನ ಮತ್ತು ಸಂಕುಚಿತವಾದಿ ಧೋರಣೆ** ಇದಕ್ಕೆ ಮೂಲ ಕಾರಣ.

4) ನಮ್ಮ ಪತ್ರ ವ್ಯವಹಾರಗಳ ವಿಧಾನ; ನಮ್ಮ ಲೇಖನಗಳು ಮತ್ತಿತರ ಪ್ರಚಾರ ಸಾಮಗ್ರಿಗಳಲ್ಲಿನ ವಸ್ತುವಿಷಯ (content) ಹಾಗೂ ಅವನ್ನು ನಾವು ಬರೆದ ಶೈಲಿ - ಇವೆಲ್ಲಾ ತಪ್ಪಾಗಿದ್ದವು. ಎಂಸಿಸಿಐ ಸ್ವಭಾವದ ಬಗೆಗಿನ ನಮ್ಮ ತಪ್ಪು ಅಸೆಸ್‌ಮೆಂಟಿನಿಂದಾಗಿ ಈ ತಪ್ಪುಶೈಲಿ ಹುಟ್ಟಿಕೊಂಡಿತು. ಇದಕ್ಕೆ ನಮ್ಮ ಮನೋನಿಷ್ಠವಾದ ಕಾರಣವಾಗಿತ್ತು.

5) "ನಮ್ಮ ತಪ್ಪುಗಳು ಕಡಿಮೆ ಇವೆ ಹಾಗೂ ನಮ್ಮ ಪ್ರತಿದಾಳಿಗಳು ಆತ್ಮರಕ್ಷಣೆಗಾಗಿ"- ಇದು ನಮ್ಮ ವಾದಗಳ ಮತ್ತು ಧೋರಣೆಯ ಒಟ್ಟು ಸಾರಾಂಶವಾಗಿತ್ತು. ನಾವು ಸ್ವವಿಮರ್ಶಾತ್ಮಕವಾಗಿರುವ ಬದಲು ಮುಖ್ಯವಾಗಿ ಎಂಸಿಸಿಐ ಮೇಲೆಯೇ ದೋಷಾರೋಪ ಹೊರಿಸಿದೆವು. **ಇದು ನಮ್ಮ ಸಂಕುಚಿತವಾದವಾಗಿತ್ತು ಹಾಗೂ ಸಮಸ್ಯೆಯ ಪರಿಹಾರಕ್ಕೆ ಕಾರ್ಮಿಕ ವರ್ಗೇತರ ಅಪ್ರೋಚ್ ಆಗಿತ್ತು.**

6) ನಾವು ಗ್ರಾಮೀಣ ಜನಸಮೂಹದ ನಡುವಿನ ವೈರುಧ್ಯಗಳಲ್ಲಿ ತೊಡಕಿಕೊಳ್ಳುತ್ತಿದ್ದೆವು. ಒಂದು ಗುಂಪಿನ ಮೇಲೆ ಅವಲಂಬಿಸಿ, ಸ್ಥಳೀಯ ಎಂಸಿಸಿಐ ಬೆಂಬಲ ನೆಲೆಯ ಮೇಲೆ ದಾಳಿ ಮಾಡುತ್ತಿದ್ದೆವು. ಜನತೆಯ ನಡುವೆ ಐಕ್ಯತೆ ಸಾಧಿಸುವ ಗುರಿಯೊಂದಿಗೆ ವೈರುಧ್ಯಗಳನ್ನು ಒಂದು ವರ್ಗ ಅಪ್ರೋಚ್‌ನಿಂದ ಪರಿಹರಿಸುವ ಬದಲು, ವೈರುಧ್ಯಗಳನ್ನು ಶತ್ರುಭಾವರಹಿತ ರೀತಿಯಲ್ಲಿ ಪರಿಹರಿಸುವ ಬದಲು ನಾವು **ಪಕ್ಷಪಾತಿತನದ ಹಾಗೂ ಕಾರ್ಮಿಕ ವರ್ಗೇತರ ಅಪ್ರೋಚನ್ನು** ಅಳವಡಿಸಿಕೊಂಡೆವು.

7) ಸಮಸ್ಯೆಗಳನ್ನು ರಾಜಕೀಯ ವಾಗ್ವಾದಗಳ ಮೂಲಕ ಬಗೆಹರಿಸುವುದರ ಬದಲಿಗೆ ನಾವು ಪದೇಪದೇ ಪ್ರತೀಕಾರಾತ್ಮಕ ಕ್ರಮಗಳಲ್ಲೇ ಮುಳುಗಿದೆವು ಹಾಗೂ ಅದಕ್ಕೆ ಆದ್ಯತೆ ನೀಡಿದೆವು. ನಾಯಕತ್ವದಲ್ಲಿ **ರಾಜಕೀಯ ಮುನ್ನೋಟದ ಕೊರತೆ**ಯಿಂದಾಗಿ ನಾವು ಸದಸ್ಯಗಣದ ವಾದಗಳ ಬಾಲಂಗೋಚಿಯಾದೆವು.

ಕ್ರೋಢೀಕರಿಸಿ ಹೇಳುವುದಾದರೆ, ನಮ್ಮ ಮನೋನಿಷ್ಠವಾದ, ಸಂಕುಚಿತವಾದ ಮತ್ತು ಸಮೀಪದೃಷ್ಟಿಗಳಲ್ಲಿ ಈ ತಪ್ಪುಗಳ ಬೇರುಗಳಿವೆ; ಅದರಿಂದಾಗಿ, ವರ್ಗಹೋರಾಟವನ್ನು ಮುನ್ನಾಗಿಸುವುದಕ್ಕಿಂತಲೂ ಸಂಕುಚಿತ, ಸ್ಥಳೀಯ ಹಿತಾಸಕ್ತಿಗಳಿಗೆ ಆದ್ಯತೆ ದೊರೆಯಿತು. ಇದು ಎರಡೂ ಪಕ್ಷಗಳ ನಡುವಿನ ಸಂಬಂಧಗಳು ಮತ್ತಷ್ಟು ಹದಗೆಡಲು ದಾರಿ ಮಾಡಿತು. ಸಾರಾಂಶದಲ್ಲಿ, ಕಾರ್ಮಿಕ ವರ್ಗೇತರ ಪ್ರವೃತ್ತಿಗಳು - ನಿಖರವಾಗಿ ಹೇಳುವುದಾದರೆ, ಪೆಟಿಬೂರ್ಶ್ವಾ ಪ್ರವೃತ್ತಿಗಳು - ಈ ಸಮಸ್ಯೆಯ ನಿಭಾವಣೆಯಲ್ಲಿ ನಮ್ಮ ಆಲೋಚನೆಯ ಮೇಲೆ ಮೇಲುಗೈಯಾದವು. ಪರಿಣಾಮವಾಗಿ, ಇಂಥ ಸಮಸ್ಯೆಗಳ ಪರಿಹಾರಕ್ಕೆ ಗತಿತಾರ್ಕಿಕ ಅಪ್ರೋಚನ್ನು ಅನುಸರಿಸುವ ಬದಲು ನಾವು ವೈರುಧ್ಯವನ್ನು ತಪ್ಪು ರೀತಿಯಲ್ಲಿ ನಿರ್ವಹಣೆ ಮಾಡಿದೆವು. ಈ ಹಿನ್ನೆಲೆಯಲ್ಲಿ, ನಾವು ಈ ಕಾರ್ಮಿಕ ವರ್ಗೇತರ ಪ್ರವೃತ್ತಿಗಳನ್ನು ತಿದ್ದಿಕೊಳ್ಳಲು ಸರ್ವಪ್ರಯತ್ನಗಳನ್ನೂ ಮಾಡುವುದಾಗಿ ಹೇಳುತ್ತಿದ್ದೇವೆ.

ಈ ರಕ್ತಪಾತಕ್ಕಾಗಿ, ನಾವು ಈ ಘರ್ಷಣೆಗಳಲ್ಲಿ ಹುತಾತ್ಮರಾದ ಎಲ್ಲರಿಗೂ ಕ್ರಾಂತಿಕಾರಿ ವಂದನೆಗಳನ್ನು ಸಲ್ಲಿಸುತ್ತೇವೆ, ಹಾಗೂ, ಈ ನಕಾರಾತ್ಮಕ ಅನುಭವದಿಂದ ಪಾಠ ಕಲಿಯುತ್ತೇವೆ ಮತ್ತು ಭಿನ್ನಾಭಿಪ್ರಾಯಗಳು ಎಷ್ಟೇ ತೀಕ್ಷ್ಣವಾಗಿದ್ದಾಗಲೂ ಸಹ ನಮ್ಮ ವರ್ಗಮಿತ್ರರ ಮೇಲೆ ಎಂದೂ ಶಸ್ತ್ರ ಎತ್ತುವುದಿಲ್ಲ ಎಂಬುದಾಗಿ ಪ್ರತಿಜ್ಞೆ ಮಾಡುತ್ತಿದ್ದೇವೆ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ರಾಜಕೀಯ ವಾಗ್ವಾದಗಳ ಮೂಲಕವೂ, ಕ್ರಾಂತಿಕಾರಿ ಆಚರಣೆಯ ಮೂಲಕ ನಮ್ಮ ರಾಜಕೀಯದ ಸರಿಯಿರುವಿಕೆಯನ್ನು ಸಾಬೀತುಪಡಿಸುವ ಮೂಲಕವೂ ಇತ್ಯರ್ಥಪಡಿಸಿಕೊಳ್ಳಬೇಕು, ಬಂದೂಕಿನ ಮೂಲಕ ಅಲ್ಲ. ಎರಡೂ ಕಡೆಯಲ್ಲಿ ಸಾವಿಗೀಡಾದ ಎಲ್ಲಾ ಹುತಾತ್ಮರಿಗೂ ನಮ್ಮ ಕ್ರಾಂತಿಕಾರಿ ವಂದನೆಗಳನ್ನು ಮತ್ತೊಮ್ಮೆ ಸಲ್ಲಿಸುವುದರ ಜೊತೆಗೆ **ನಾವು ನಮ್ಮ ತಪ್ಪುಗಳನ್ನು ಅರ್ಥಮಾಡಿಕೊಂಡಿದ್ದೇವೆ, ಹಾಗೂ ಈ ಸಾವುನೋವುಗಳಿಂದಾಗಿ ತೊಂದರೆಗೀಡಾದ** ಎಲ್ಲಾ **ಕುಟುಂಬದವರಲ್ಲೂ ಕ್ಷಮೆಯನ್ನು ಬೇಡುತ್ತಿದ್ದೇವೆ.** ನಾವು, ಸಿಪಿಐ (ಎಂಎಲ್) (ಪೀವಾ) ಕೇಂದ್ರ ಸಮಿತಿಯವರು ಭಾರತದ ಕ್ರಾಂತಿಕಾರಿ ಜನಸಮೂಹದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಬಿಹಾರ ಮತ್ತು ಝಾರ್ಖಂಡದ ಜನತೆಯಲ್ಲಿ, ನಾವು ಎಸಗಿರುವ ಈ ಹಿಂದಿನ ಎಲ್ಲಾ ತಪ್ಪುಗಳಿಗಾಗಿ ನಮ್ಮನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ನಮ್ಮ ಗಂಭೀರ ಪ್ರಮಾದಗಳನ್ನು ನಾವು ತಡವಾಗಿ ಮನಗಂಡಿದ್ದೇವಾದರೂ, ಇಂತಹ ಆತ್ಮಹತ್ಯಾಕಾರಿ ಕ್ರಿಯೆಗಳನ್ನು ಮುಂದೆಂದೂ ಎಸಗುವುದಿಲ್ಲವೆಂದು ನಿಮಗೆ ಭರವಸೆ ಕೊಡುತ್ತೇವೆ.

ನಮ್ಮೆಲ್ಲಾ ಪ್ರೀತಿಪಾತ್ರ ಹುತಾತ್ಮರ ಕನಸುಗಳನ್ನು ನನಸಾಗಿಸುತ್ತಾ ಪ್ರಜಾಯುದ್ಧವನ್ನು ತೀವ್ರಗೊಳಿಸುತ್ತೇವೆ, ನಮ್ಮ ಮಹಾನ್ ನಾಯಕರಾದ ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್ ಮತ್ತು ಮಾವೊರ ಬೋಧನೆಗಳನ್ನು ಅಳವಡಿಸಿಕೊಂಡು ಭಾರತದ ಪ್ರಜಾತಂತ್ರ ಕ್ರಾಂತಿಯನ್ನು ಯಶಸ್ಸಿನೆಡೆಗೆ ಮುನ್ನಾಗಿಸುತ್ತೇವೆ ಹಾಗೂ ಅಲ್ಲಿಂದ ಮುಂದೆ ಒಂದು ನಿಜವಾದ ಮತ್ತು ಸುಸ್ಥಿರ (sustaining) ಕಮ್ಯೂನಿಸ್ಟ್ ಸಮಾಜದ ನಿರ್ಮಾಣದೆಡೆಗೆ ಮುನ್ನಾಗಿಸುತ್ತೇವೆ ಎಂಬುದಾಗಿ ಪ್ರತಿಜ್ಞೆ ಮಾಡುತ್ತೇವೆ,. ನಮ್ಮ ತಪ್ಪುಗಳನ್ನು ತಿದ್ದುಪಡಿ ಮಾಡಿಕೊಳ್ಳುವ ಹಾಗೂ ನಮ್ಮನ್ನು ನಿಜವಾದ ಕಾರ್ಮಿಕ ವರ್ಗ ಕ್ರಾಂತಿಕಾರಿಗಳಾಗಿ ಪುನರ್‌ರೂಪಿಸಿಕೊಳ್ಳುವ ಪಣ ತೊಡುತ್ತೇವೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ**
**ಕೇಂದ್ರ ಸಮಿತಿ**
**20.9.2004** **ಸಿಪಿಐ (ಮಾಲೆ) (ಪೀವಾ)**